ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K R.N.N. 240 ಸಂಪುಟ : 1 ಸಂಚಿಕೆ : 5 ಜೂ॥ 1 ರಿಂದ 15-1997 ಪುಟಗಳು : 24 ರೂ. 5



ಮಳೆಗಾಲ ಬಂತಲ್ಲವೆ — ಚಳಿ !! ಚಳಿ !!!

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ಓ. ರಮೇಶ್

ಪ್ರಸಾರ ವ್ಯವಸ್ಥಾಪಕ :
ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ

ಮುದ್ರಣ :
ಎಂ.ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
ವಿನಾಯಕನಗರ, ಮೈಸೂರು-12

ಗೌರವ ವ್ಯವಸ್ಥಾಪಕ :
ಪಟ್ಟಡ ಎಂ. ಪ್ರಭಾಕರ್

ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಬೊಗಾದಿ ಸರ್ಕಲ್,
ಹಿನಕಲ್ ಪೋಸ್ಟ್, ಮೈಸೂರು–17

ಒಳನೋಟ

ಪುಟಗಳು

ಅರೆ ಭಾಷಿಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ :–

ವಸ್ತು ಸಂಗ್ರಾಲಯ, ಮನೆಯ ಚರಿತ್ರೆ, ಪುತ್ಥಳಿಗಳ ಪ್ರತಿಷ್ಠಾಪನೆ ಅತೀ ಶೀಘ್ರದಲ್ಲಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಸಮಾಜ, ವಿದ್ಯಾ ಸಂಘ, ಅಭಿವೃದ್ಧಿ ಸಂಘಗಳ ವತಿಯಿಂದ ಮಡಿಕೇರಿಯಲ್ಲಾಗಲಿ ಸುಳ್ಯ ನಗರದಲ್ಲಾಗಲೀ ಹಳೆಯ ಸಂಪ್ರದಾಯದ ಉಡುಗೆ ತೊಡಿಗೆಗಳು, ಉಡುಪು, ಆಭರಣಗಳು, ಪಾತ್ರೆ ಪಗಡಿ, ಚಿನ್ನಬೆಳ್ಳಿಗಳ ವಿವಿಧ ಭಂಗಿಗಳ ಚಿತ್ರಗಳು, ಹಳೇ ಕಾಲದ ನಾಣ್ಯಗಳು, ಭಿತ್ತಿ ಪತ್ರಗಳು, ವೀರ ಧೀರರ ಫೋಟೋಗಳು, ಕತ್ತಿ ಕೋವಿ ಆಯುಧಗಳು, ಪ್ರಮುಖ ದಾಖಲೆಗಳು ಹೀಗೆ ಪುರಾಣಕ್ಕೆ ಹಾಗೂ ಇತಿಹಾಸಕ್ಕೆ ಸಂಬಂಧಪಟ್ಟ ದಾಖಲಾರ್ಹ ವಸ್ತುಗಳನ್ನು ಮುಂದಿನ ಪೀಳಿಗೆಗಾಗಿಯಾದರು ಸಂಗ್ರಹಿಸುವುದು ಅತ್ಯಾವಶ್ಯಕ.

ಮನೆಯ ಚರಿತ್ರೆಗಳು, ದೆವ್ವ, ದೇವರ ಚರಿತ್ರೆಗಳು, ನಮ್ಮ ಜನಾಂಗದ ಮನೆಮನೆಯ ಚರಿತ್ರೆಗಳು ಹಬ್ಬ ಹರಿದಿನಗಳ ಕುರಿತು ಮಾಹಿತಿ ಸಂಗ್ರಹಣೆ ಮಾಡಬೇಕು. ಇಂತವುಗಳನ್ನು ಪುಸ್ತಕಗಳ ರೂಪದಲ್ಲಿ ಬಿಡುಗಡೆ ಮಾಡಿದಾಗ ಅರಿವು ಮೂಡಿಸಲು ಸುಲಭ ಸಾಧ್ಯ.

ಪುತ್ಥಳಿಗಳ ಸ್ಥಾಪನೆಗಾಗಿ ಅಂದು 1837ರಲ್ಲಿ ಕೊಡಗಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಮ್ಮ ಜನಾಂಗದ ನೆಚ್ಚಿನ ಏಕೈಕ ವ್ಯಕ್ತಿಯಾಗಿ ಮೆರೆದು ವೀರಗಂಬವೇರಿನ ದಿವಂಗತ ಗುಡ್ಡೇರ ಅಪ್ಪಯ್ಯಗೌಡರ ಕಂಚಿನ ಪುತ್ಥಳಿ ಸ್ಥಾಪಿತವಾಗಬೇಕು. ಇದನ್ನು ಮಡಿಕೇರಿಯ ಜನನಿಬಿಡ ಸ್ಥಳವಾದ ಖಾಸಗಿ ಬಸ್ಸು ನಿಲ್ದಾಣದ ವೃತ್ತದಲ್ಲಿ ಸ್ಥಾಪಿತವಾದರೆ ಅದು ನಮ್ಮ ಜನಾಂಗಕ್ಕೆ ಮತ್ತು ಕೊಡಗಿನ ಮಹಾಜನತೆಗೆಸಂದ ಕಾಣಿಕೆಯಾಗಬಹುದು.

ಪೈಪೋಟಿಯಲ್ಲಿ 45ನೇ ಸ್ಥಾನದಲ್ಲೇ ಇರುವ ಭಾರತ

53 ರಾಷ್ಟ್ರಗಳ ವಿಶ್ವಮಟ್ಟದ ಪೈಪೋಟಿಯಲ್ಲಿ ಭಾರತ 45ನೇ ಸ್ಥಾನದಲ್ಲಿಯೇ ಮುಂದುವರಿದಿದೆ. ಅಂತರಾಷ್ಟ್ರೀಯ ಅಭಿವೃದ್ಧಿಯ ಹಾರ್‌ವರ್ಡ್ ಇನ್‌ಸ್ಟಿಟ್ಯೂಷನ್‌ನ ನಿರ್ದೇಶಕ ಪ್ರೊ. ಜೆಫ್ರಿ ಡಿ. ಸಚನ್ ಮತ್ತು ವರ್ಲ್ಡ್ ಎಕನಾಮಿಕ್ಸ್ ಫೋರಂ ಪ್ರಕಟಿಸಿರುವ 1997 ವರದಿ ಇದನ್ನು ತಿಳಿಸಿದೆ.

ಆರ್ಥಿಕ ಪ್ರಗತಿ ಸಾಧಿಸಲು ಯತ್ನಿಸುತ್ತಿರುವ ಇತರ ರಾಷ್ಟ್ರಗಳು ಉತ್ತಮ ಯತ್ನ ತೋರಿವೆ. ಇಂಡೋನೇಷಿಯಾ 15ನೇ ಸ್ಥಾನ, ಥೈಲ್ಯಾಂಡ್ 18ನೇ, ಈಜಿಪ್ಟ್28ನೇ, ಚೀನಾ 29ನೇ, ಫಿಲಿಫೈನ್ಸ್ 34ನೇ, ಮೆಕ್ಸಿಕೋ 33ನೇ, ಪೆರು 40ನೇ, ಮತ್ತು ಬ್ರೆಝಿಲ್ 42ನೇ ಸ್ಥಾನಕ್ಕೆ ಬಂದಿವೆ. ಆದರೆ ಭಾರತ ಕಳೆದ ವರ್ಷದಲ್ಲಿದ್ದಂತೆ 45ನೇ ಸ್ಥಾನದಲ್ಲಿಯೇ ಮುಂದುವರಿದಿದೆ.

ದೀರ್ಘಾವಧಿಯ ಪ್ರಗತಿಯನ್ನು ನೀಡುವಂತಹ ಕಾರ್ಯನೀತಿಗಳು ಮತ್ತು ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವಂತಹವು ಮಾತ್ರ ಪೈಪೋಟಿ ನಡೆಸುವಂತ ರಾಷ್ಟ್ರಗಳೆನಿಸುತ್ತವೆ ಎಂಬುದು ಜೆಫ್ರಿ ಅವರ ಅಭಿಪ್ರಾಯವಾಗಿದೆ.

ಕ್ಷಿಪ್ರ ಆರ್ಥಿಕತೆಯನ್ನು ಹೊಂದಿರುವ ಸಿಂಗ್‌ಪೂರ್ ಮತ್ತು ಹಾಂಗ್‌ಕಾಂಗ್ ಮತ್ತೆ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನದಲ್ಲಿವೆ.

ಭಾರಿ ಪೈಪೋಟಿ ನಡೆಸುವ ಅಮೇರಿಕ ಈ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ತಾಂತ್ರಿಕತೆ ಮತ್ತು ನಿರ್ವಹಣೆಯಲ್ಲಿ ಅಮೇರಿಕವನ್ನು ಪ್ರಮುಖವೆಂದು ವರ್ಗೀಕರಿಸಲಾಗಿದೆ. ಬ್ರಿಟನ್ 15ನೇ ಸ್ಥಾನದಿಂದ 7 ಸ್ಥಾನಕ್ಕೆ ಏರಿದೆ. ಕೆನಡಾ 8ನೇ ಸ್ಥಾನದಿಂದ 4ಕ್ಕೆ ಏರಿದೆ. ಇವರಲ್ಲೆಲ್ಲಾ ಇಂಡೋನೇಷಿಯಾ ಕ್ಷಿಪ್ರವಾದ ಏರಿಕೆಯನ್ನು ಸಾಧಿಸಿದೆ. ಕಳೆದ ವರ್ಷ 30ನೇ ಸ್ಥಾನದಲ್ಲಿದ್ದುದ್ದು ಈಗ 15ನೇ ಸ್ಥಾನಕ್ಕೆ ಬಂದಿದೆ. ವಿಶ್ವದ ಅತ್ಯಂತ ಕ್ಷಿಪ್ರ ಆರ್ಥಿಕ ಪ್ರಗತಿಯಲ್ಲಿರುವ ಚೀನಾ 36 ರಿಂದ 29ನೇ ಸ್ಥಾನಕ್ಕೆ ಏರಿದೆ.

ಈ ಎರಡು ರಾಷ್ಟ್ರಗಳು ಭಾರತ ಮತ್ತು ಬ್ರೆಝಿಲ್‌ನೊಂದಿಗೆ ಆರ್ಥಿಕ ಸುಧಾರಣೆ ಮತ್ತು ವಿಶ್ವ ಆರ್ಥಿಕತೆಯಲ್ಲಿ ಪ್ರಮುಖಪಾತ್ರ ವಹಿಸಲಿವೆ.

ಸಕಲಾನುಭವಗಳ ಸಾಕಾರ ಮೂರ್ತಿ, ಸ್ವಾತಂತ್ರ್ಯ ಸೇನಾನಿ

ಪಾಂಡನ ಡಿ. ಸುಬ್ಬಯ್ಯ

ಕೊಡಗು ಗೌಡ ಜನಾಂಗದ ಹಿರಿಯ ಮುತ್ಸದ್ಧಿ, ಧೀಮಂತ ವ್ಯಕ್ತಿ, ಸ್ವಾತಂತ್ರ್ಯ ಹೋರಾಟಗಾರ, ಸಕಲಾನುಭವಗಳ ಸಾಕಾರಮೂರ್ತಿ ಇವರನ್ನು "ಕೊಡಗು ಸಂಗಾತಿ" ಭೇಟಿಯಾಗಿ ಕುಶಲ ವಿಚಾರಿಸಿ, ಗೌಡ ಜನತೆಯ ಹಿತಕ್ಕಾಗಿ ಅವರ ಅನುಭವದ ಪುಟಗಳನ್ನು ತಿರುವಿದಾಗ, ಅವರು ಸಂಗಾತಿಗೆ ತಮ್ಮ ಅನುಭವದ ಹೊನಲನ್ನು ಹರಿಯಬಿಟ್ಟರು. ಇವರ ನುಡಿಗಳು ನಮ್ಮ ಓದುಗರಿಗೆ ದಾರಿ ದೀಪವಾಗಲೆಂದು ಬಯಸಿ ಅವರ ಮಾತುಗಳನ್ನು ತಮ್ಮ ಮುಂದಿಡುತ್ತಿದ್ದೇವೆ.

ಸಂಗಾತಿ : ನಿಮ್ಮ ಪರಿಚಯವನ್ನು ನಮ್ಮ ಓದುಗರಿಗೆ ಮಾಡಿಕೊಡುವಿರಾ ?

ಉ : ಅಂದಿನ ಹುದಿಕೇರಿನಾಡು ಅಂದರೆ ಇಂದಿನ ಮಡಿಕೇರಿ ನಾಡಿನ ಮರಗೋಡು ಗ್ರಾಮದ ಪಾಂಡನ ದೇವಪ್ಪ, ಪೊನ್ನಮ್ಮ ದಂಪತಿಗಳ ಮಗನಾಗಿ 1915 ರಲ್ಲಿ ಜನಿಸಿದೆ. ಅಂದರೆ ಮುಂದಿನ ಜುಲೈ 9 ಬಂದರೆ ನನಗೆ 82 ವರ್ಷಪೂರ್ತಿಯಾಗುತ್ತದೆ. ದಿ. ಚೆರಿಯಮನೆ ಕುಶಾಲಪ್ಪನವರು ಕಟ್ಟಿಸಿದ ಹುಲ್ಲಿನ ಛಾವಣಿಯ ಶಾಲೆಯ ಕೆಳಗೆ ನಾಲ್ಕನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ಮಡಿಕೇರಿಯ ಸೆಂಟ್ರಲ್ ಸ್ಕೂಲ್ ಅಂದರೆ ಈಗಿನ ಜೂನಿಯರ್ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಓದಿದರೂ ಅದನ್ನು ಮಧ್ಯದಲ್ಲೇ ಬಿಟ್ಟು ಬೆಂಗಳೂರು ಸೈಂಟ್ ಪಾಲ್ಜಿನಪ ಶಾಲೆಗೆ ಸೇರಿದರೂ ಅನಾರೋಗ್ಯದ ಕಾರಣ ಶಾಲೆಬಿಟ್ಟು ಊರಿಗೆ ಹೆಂತಿರುಗ ಬೇಕಾಯಿತು.

ಸಂಗಾತಿ : ನೀವು ರಾಜಕೀಯಕ್ಕೆ ಯಾವಾಗ ಮತ್ತು ಹೇಗೆ ಪಾದಾರ್ಪಣೆ ಮಾಡಿದಿರಿ?

ಉ : ರಾಜಕೀಯಕ್ಕೆ ಬರುವ ಆಲೋಚನೆಯೇ ನನಗಿರಲಿಲ್ಲ. ನನ್ನ ವಿದ್ಯಾಭ್ಯಾಸದ



ಪಾಂಡನ ಡಿ. ಸುಬ್ಬಯ್ಯ

ಬಳಿಕ ಪಂದಿಕುತ್ತಿ ಚಂಗಪ್ಪನವರ ಪ್ರೇರಣೆಯಿಂದ ಮಡಿಕೇರಿ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಉಚಿತವಾಗಿ ಕೆಲಸ ಮಾಡಿ ಅನುಭವ ಸಂಪಾದನೆ ಮಾಡಿಕೊಂಡೆ. 1930ರಲ್ಲಿ ಮೂರ್ನಾಡಿನ ಸಹಕಾರ ಮಾರಾಟ ಸಂಘದ ಮ್ಯಾನೇಜರ್ ಆಗಿ 2 ವರ್ಷ ಸೇವೆ ಸಲ್ಲಿಸಿದೆ. 1939ರಲ್ಲಿ ಸಹಕಾರ ಸಂಘಗಳ ಮೇಲ್ವಿಚಾರಕ ತರಬೇತಿಗಾಗಿ ತಂಜಾವೂರಿಗೆ ಹೋಗಲು ಆಯ್ಕೆಯಾದ ಏಳು ಮಂದಿಯಲ್ಲಿ ತಾನೂ ಒಬ್ಬನಾಗಿ 7 ತಿಂಗಳು ತರಬೇತಿ ಪಡೆದು ಅದರ ಸಮಾರೋಪದ ಹೊತ್ತಿಗೆ ತಮಿಳು ಭಾಷೆಯನ್ನು ಕಲಿತು ಅದೇ ಭಾಷೆಯಲ್ಲಿ ಭಾಷಣ ಮಾಡಿ ಅಲ್ಲಿನ ಜನಮನವನ್ನು ಗೆದ್ದೆ. ಅದೇ ನನ್ನ ರಾಜಕೀಯ ಪಾದಾರ್ಪಣೆಗೆ ಮುಖ್ಯ ಪ್ರೇರಣೆಯಾಯಿತೆಂದು ಹೇಳುವಾಗ, ಅಂದಿನ ಆತ್ಮವಿಶ್ವಾಸ ಇಂದೂ ಅವರ ಮುಖದಲ್ಲಿ ಮಾಡಿತ್ತು. ಮಾತು ಮುಂದುವರಿದು ತಮ್ಮ ಸ್ವಾತಂತ್ರ್ಯ ಹೋರಾಟದ ಬದುಕನ್ನು ಹೆಮ್ಮೆಯಿಂದ ವಿವರಿಸುತ್ತಾ, "ನಾನು ವಿದ್ಯಾರ್ಥಿಯಾಗಿದ್ದಾಗ ಮಹಾತ್ಮಾಗಾಂಧೀಜಿ ಮಡಿಕೇರಿಗೆ

ಪಾಂಡನ ಡಿ. ಸುಬ್ಬಯ್ಯ ಸ್ವಾತಂತ್ರ್ಯ ಹೋರಾಟಗಾರ. ಇಂದಿನ ಪೀಳಿಗೆಯ ಮುತ್ಸದ್ಧಿ ರಾಜಕೀಯ ಸಮಾಜಸೇವೆಯಲ್ಲಿ ಮಿಂದು ಬೆಂದು ವಿಶ್ರಾಂತಿ ಜೀವನ ನಡೆಸುತ್ತಿರುವ ಈ ಮಹಾನ್ ವ್ಯಕ್ತಿಯ ಪರಿಚಯವನ್ನು ನಿಮ್ಮ ಮುಂದಿಡಲು ಸಂಗಾತಿ ಬಳಗ ಅತಿ ಸಂತೋಷಪಡುತ್ತದೆ. ಇವರನ್ನು ನಮ್ಮ ಬಳಗದ ಪಟ್ಟಡ ಶಿವಕುಮಾರ್ ಸಂದರ್ಶಿಸಿದಾಗ – ಸಂ.

ಬಂದಾಗ ಹೆಚ್ಚಿನ ಮುತುವರ್ಜಿ ವಹಿಸಿದ್ದೇ ಅಲ್ಲದೆ, ಗಾಂಧೀಜಿ ಉಪವಾಸ ಕೈಗೊಂಡಾಗ ನಾನೂ ನನ್ನ ಗೆಳೆಯರಾದ ಕುಕ್ಕುನೂರು ನಂಜುಂಡ ಮತ್ತು ಪೂವಯ್ಯನವರೊಡಗೂಡಿ 3 ದಿನ ಉಪವಾಸ ಕೈಗೊಂಡೆ, ಚರಕದಿಂದ ನೂಲು ತೆಗೆದು ಮಂಗಳೂರಿನಲ್ಲಿ ಮಾರಾಟ ಮಾಡಿ ಅದರಿಂದ ಬಟ್ಟೆಕೊಂಡುಧರಿಸುತ್ತಿದ್ದ ಮಹಿಳೆಯರು ಸಾರಾಯಿ ವಿರೋಧಿಸಿ ಪಿಕೆಟಿಂಗ್ ನಡೆಸಿದಾಗ ನಾನೂ ನನ್ನ ಗೆಳೆಯರೊಡನೆ ಪಾಲ್ಗೊಂಡೆ. 1942ರ ಕ್ವಿಟ್ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭೂಗತವಾಗಿ ಬಂಧನಕ್ಕೊಳಗಾಗದೆ, ಹೋರಾಡಿದೆ ಎಂದಾಗ 82 ವರ್ಷದ ವೃದ್ಧರಲ್ಲಿ 28 ವರ್ಷದ ಯುವಕನನ್ನು

ಸಂಗಾತಿ ಕಂಡಿತು. 1947ರಲ್ಲಿ ಸ್ವಾತಂತ್ರ್ಯ ವನ್ನು ಸಂಭ್ರಮದಿಂದ ಆಚರಿಸಿದೆವು. ನಾನು 1932ರಲ್ಲಿ ಪರಕೀಯ ಬಟ್ಟೆಯ ಕಿತ್ತೊಗೆದ ಬಳಿಕ ಇಂದಿನವರೆಗೂ ಖಾದಿ ಧರಿಸುತ್ತಿದ್ದೇನೆ ಎಂದಾಗ ಆ ಖಾದಿ ಧಾರಿಯ ದಿಟ್ಟ ಹೆಜ್ಜೆಗೆ ಸಂಗಾತಿ ಎದೆ ತುಂಬಿ ಹರ್ಷಿಸಿತು.

ಇಂತಹ ದೇಶಭಕ್ತ ದೇಶ ಸೇವೆಯೊಡನೆ ಜನಸೇವೆಯಲ್ಲಿಯೂ ಹಿಂದೆ ಬೀಳಲಿಲ್ಲ. 1940ರಲ್ಲಿ ನಾಪೊಕ್ಲುವಿನಲ್ಲಿ ಕೋ-ಅ-ಸ್ಟೋರ್ ಮ್ಯಾನೇಜರ್ ಆಗಿದ್ದವರು 1943 ರಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡ್‌ನ ಮೇಲ್ವಿಚಾರಕರಾಗಿ, ಮನೆ ಮನೆ ಸುತ್ತಿದ್ದರು. ಕೊಡಗು ಕಿತ್ತಳೆ ಬೆಳೆ ಸಹಕಾರ ಸಂಘದ ಮೈಸೂರು ಶಾಖೆಯಲ್ಲಿ ಕೆಲಸ ಮಾಡಿ, ಅಮ್ಮತ್ತಿ, ವಿರಾಜಪೇಟೆಯಲ್ಲಿಯೂ ಕೆಲಸಮಾಡಿ, ನಂತರ ಮಡಿಕೇರಿಯಲ್ಲಿ ಕೆಲವರ ಸಹಯೋಗದೊಡನೆ ಮಾಡರ್ನ್ ಸ್ಟೋರ್ ಸ್ಥಾಪನೆ ಮಾಡಿ ಸಂಪೂರ್ಣ ಜನಬಳಕೆ ಪಡೆದುಕೊಂಡರು. ಅವರೇ ಹೇಳುತ್ತಾರೆ, ಇದರಿಂದ ನಾನು 1942ರ ಸಾರ್ವತ್ರಿಕ ಚುನಾವಣೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಆಗಿನ ಕೊಡಗು ಪ್ರತ್ಯೇಕ ಪಕ್ಷದ ಯಾಲದಾಳು ಅಯ್ಯಪ್ಪನವರನ್ನು ಸೋಲಿಸಿ 5 ವರ್ಷ ಶಾಸಕನಾಗಿ ಕೆಲಸಮಾಡಿದೆ. ಆಗ ಕೊಡಗು "ಸಿ" ರಾಜ್ಯವಾಗಿತ್ತು. ನಂತರ 1956 ರಲ್ಲಿ ಕೊಡಗು ಮಹಾಮೈಸೂರಿಗೆ ಸೇರ್ಪಡೆಗೊಂಡ ನಂತರ 5 ತಿಂಗಳು ಕರ್ನಾಟಕದ ವಿಧಾನಸೌಧದಲ್ಲಿ ಕೂರುವ ಭಾಗ್ಯ ದೊರೆಯಿತು. (ಈಗಿನ ಕಾಂಗ್ರೆಸ್ ಪಕ್ಷದ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಯಾವಾಗ 1969ರಲ್ಲಿ ಕಾಂಗ್ರೆಸ್ಸನ್ನು ಇಂದಿರಾಗಾಂಧಿ ಒಡೆದರೋ, ಅಂದೇ, ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದ ಪಕ್ಷವೊಂದು ತನ್ನ ತಳಪಾಯವನ್ನು ತಾನೇ ದುರ್ಬಲಗೊಳಿಸಿಕೊಂಡಿತು. ನಾನು ಎಸ್. ನಿಜಲಿಂಗಪ್ಪನವರ ಜೊತೆಗೂಡಿದೆ. ಆದರೆ ನಂತರ ವ್ಯವಸಾಯದ ಕಡೆಗೆ ಹೆಚ್ಚಿನ ಗಮನ ನೀಡಿದೆ ಎಂದು ನುಡಿದರು.

ಇವರು ಶಾಸಕರಾಗಿದ್ದ ಕಾಲದಲ್ಲಿ ಬಹಳಷ್ಟು ಜನಪರ ಕಾರ್ಯ ಮಾಡಿದ ಸಂತೃಪ್ತಿ ಇವರಿಗಿದೆ. 1960ರಲ್ಲಿ ಪ್ರಥಮ ಪಂಚಾಯತ್ ರಾಜ್ ಚುನಾವಣೆಯಲ್ಲಿ, ಆರಿಸಿ ಬಂದು ಮಡಿಕೇರಿ ತಾಲ್ಲೂಕು ಬೋರ್ಡಿನಲ್ಲಿ 9 ವರ್ಷಗಳ ಕಾಲ ಅಧ್ಯಕ್ಷರಾಗಿ ನಾಡಿನ ಅಭಿವೃದ್ಧಿಗಾಗಿ ದುಡಿದಿದ್ದಾರೆ.)

ಸಂಗಾತಿ : ಗೌಡ ಇತಿಹಾಸದ ಬಗ್ಗೆ ನೀವೇನು ಹೇಳುವಿರಿ ?

ಉ : ಗೌಡ ಇತಿಹಾಸದ ಬಗ್ಗೆ ನಾಲ್ಕು ಪುಸ್ತಕಗಳನ್ನೇ ಬರೆಯಬಹುದು, ಅದಕ್ಕೆ ಸಂಶೋಧನೆ ಅಗತ್ಯ. ನಾವು ಹಾವೇರಿಯಿಂದ ಬಂದವರೆಂದು ಇತಿಹಾಸ ಹೇಳುತ್ತದೆ. ಅಲ್ಲಿಂದ ಬಂದು ದಕ್ಷಿಣ ಕನ್ನಡದಲ್ಲಿ ನೆಲಸಿ, ಅಲ್ಲಿಂದ ರಾಜಕಾಲದಲ್ಲಿ ಇಲ್ಲಿಗೆ ಕರೆಸಿ ನಮಗೆ ಜಮ್ಮಜಾಗಿರಿಗಳನ್ನು ನೀಡಿ ಸಮಾನ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಿದರು. ಇದರಿಂದ ಹಲವಾರು ಜನ ಪಟೇಲರಾಗಿ, ಊರಿನ ಮುಖಂಡರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ನಾಡಿನ ಅಭಿವೃದ್ಧಿಗೆ ದುಡಿಯುತ್ತಲೇ ಇದ್ದಾರೆ.

ಸಂಗಾತಿ : ಸ್ವಾತಂತ್ರ್ಯ ಪೂರ್ವದ ಗೌಡ ಜನರಿಗೂ ಇಂದಿನ ಗೌಡ ಜನರಿಗೂ ಏನಾದರೂ ವ್ಯತಾಸವಿದೆಯೆ ?

ಉ : ಅಜಗಜಾಂತರವಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಾವು ಬ್ರಿಟೀಷರಿಗೆ ಮಾತ್ರ ಗುಲಾಮರಾಗಿರಲಿಲ್ಲ ಆಡಳಿತದಲ್ಲಿ ಮುಖ್ಯಪಾತ್ರವಹಿಸಿದ್ದ ಇತರ ಜನಾಂಗದವರಿಂದ ಅನೇಕ ರೀತಿಯ ತೊಂದರೆಗಳನ್ನು ಅನುಭವಿಸಬೇಕಾಯಿತು. ನಮ್ಮ ಜನಾಂಗವನ್ನು ಕೀಳುಮಟ್ಟದಲ್ಲಿ ನಡೆಸಿಕೊಳ್ಳಲಾಗುತ್ತಿತ್ತು. ವಿದ್ಯೆಯೆಂಬುದು ನಮ್ಮ ಜನರಿಗೆ ಕನಸಿನ ಮಾತಾಗಿತ್ತು. ಸ್ವಾತಂತ್ರ್ಯ ಹೋರಾಟ ಪ್ರಾರಂಭದ ಬಳಿಕ ಈ ಜನಾಂಗ ಭೇದ ಕಡಿಮೆಯಾಗಿ ಈಗ ಸುಧಾರಣೆ ಕಂಡುಬಂದಿದೆ.

ಸಂಗಾತಿ : ನೀವು ಯಾವುದಾದರು ಗೌಡ ಸಂಘ ಸಂಸ್ಥೆಯಲ್ಲಿ ದುಡಿದಿದ್ದೀರಾ?

ಉ : 1942 ರಿಂದ 1974 ರವರೆಗೆ ಗೌಡ ವಿದ್ಯಾಸಂಘದ ಆಡಿಟರ್ ಆಗಿದ್ದೆ. 1874 ರಲ್ಲಿ ಅದರ ಅಧ್ಯಕ್ಷನಾಗಿದ್ದೆ. ನನ್ನ ಕಾಲದಲ್ಲಿ ಮೈಸೂರಿನಲ್ಲಿ ಶಾಖಾ ಕಟ್ಟಡವನ್ನು ಕಟ್ಟಲು ಅಸ್ತು ದೊರೆಯಿತು. ಗೌಡ ಸಮಾಜದ ಸ್ಥಾಪನೆಗೂ ಸಹ ನಾನೂ ಕಾರಣಕರ್ತನಾಗಿದ್ದೇನೆ. ವಿದ್ಯಾರ್ಥಿವೇತನ ನಿಧಿ ಸ್ಥಾಪನೆಗೂ ಪ್ರಯತ್ನಪಟ್ಟಿದ್ದೇನೆ.

ಸಂಗಾತಿ : ಇಂದಿನ ಗೌಡ ಸಂಘಸಂಸ್ಥೆಗಳ ಬಗ್ಗೆ ನಿಮ್ಮ ಅಭಿಪ್ರಾಯ ಮತ್ತು ಸಲಹೆಯೇನು ?

ಉ : ಹಿಂದಿನ ದಿನಗಳಲ್ಲಿ ಪರಸ್ಪರ ಸೌಹಾರ್ದತೆಯಿಂದ, ಒಮ್ಮತದಿಂದ ವಿಚಾರ ವಿನಿಮಯ ಮಾಡಿಕೊಂಡು ಬರುತ್ತಿದ್ದೆವು. ಆದರೆ ಇಂದು ಆ ಗುಣಗಳು ಕಣ್ಮರೆಯಾಗುತ್ತಿವೆ. ಅಷ್ಟೇ ಏಕೆ ? ಸದಸ್ಯತ್ವ ನೋಂದಾವಣೆಯೂ ಸಮರ್ಪಕವಾಗಿ ನಡೆಯುತ್ತಿಲ್ಲ. ಕೇವಲ ಕಟ್ಟಡ ನಿರ್ಮಾಣ ಮಾಡುವುದು, ಹಣ ಸಂಪಾದನೆ ಮಾಡುವುದು ಅಭಿವೃದ್ಧಿಯ ಸೂಚಕವಲ್ಲ. ಗ್ರಾಮೀಣ ಬಡ ಮಕ್ಕಳನ್ನು ಆರಿಸಿ, ಅವರಿಗೆ ಆಶ್ರಯ ನೀಡಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದಾಗ ಮಾತ್ರ ಅದರ ಉದ್ದೇಶ ಈಡೇರಿದಂತಾಗುತ್ತದೆ.

(11ನೇ ಪುಟಕ್ಕೆ)

ಗೌಡ – ಗೌಡ ರಾಜ್ಯ

(ಕಳೆದ ಸಂಚಿಕೆಯಿಂದ)

ಇದರಿಂದ 'ಗೌಡ' ಶಬ್ದದ ಪ್ರಾಚೀನತೆಯನ್ನು ನಿರ್ಣಾಯಕವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ರಾಜ್ಯದ ಆಡಳಿತಾಂಗದ ಒಂದು ಹುದ್ದೆ ಹೆಸರನ್ನು ಸೂಚಿಸುತ್ತದೆ. ಯುದ್ಧ, ವ್ಯವಸಾಯದಲ್ಲಿ ನುರಿತ ಒಂದು ಜನಾಂಗ ರಾಜ್ಯಸ್ಥಾಪನೆಯ ನಂತರ ವ್ಯವಸ್ಥಿತ ಹಾಗೂ ಸುಭದ್ರ ಆಡಳಿತಕ್ಕಾಗಿ ತನ್ನವರನ್ನೇ ಮುಖ್ಯ ಸ್ಥಾನಗಳಿಗೆ ನೇಮಿಸಿಕೊಳ್ಳುವುದು ಪೂರ್ವದ ರಾಜನೀತಿಯಾಗಿತ್ತು. ಹೊಸ ಹೊಸ ಪ್ರಾಂತ್ಯಗಳನ್ನು ಗೆದ್ದಾಗ ಸ್ಥಳದ ಪ್ರಜೆಗಳಲ್ಲಿ ವಿಶ್ವಾಸವಿರುತ್ತಿರಲಿಲ್ಲ. ಆದ್ದರಿಂದ ಚೋಳರು, ಗಂಗರು ತಮ್ಮ ಜನರಿಗೆ ಗೌಡಿಕೆ ಕೊಟ್ಟು ಆ ಮೂಲಕ ಗ್ರಾಮಾಂತರದಲ್ಲಿ ಶಾಂತಿ ಸುವ್ಯವಸ್ಥೆಗಳು ಶಾಶ್ವತವಾಗಿ ನೆಲೆಸುವಂತೆ ಮಾಡುತ್ತಿದ್ದರು. ಆತನೆ ಊರ ಮುಖ್ಯಾಧಿಕಾರಿ, ನ್ಯಾಯಾಧೀಶ. ಗೌಡನನ್ನು ಸಾಮಾನ್ಯವಾಗಿ ರಾಜಪ್ರತಿನಿಧಿಗಳು ನೇಮಕ ಮಾಡುತ್ತಿದ್ದರು.

ಈ ಜನಾಂಗದ ಬಹುಪಾಲು ಜನರಿಗೆ ಪೂರ್ವಕಾಲದ ಅರಸುಗಳಿಂದ ಬಂದ ಉಂಬಳಿಗಳು ಇವೆ. ರಾಜ ಯೋಗ್ಯವಾದ ಪಲ್ಲಕ್ಕಿ, ಛತ್ರಿ ಚಾಮರಗಳ ಬಿರುದು ಬಾವಲಿಗಳು ಇವೆ.

"ಗೌಡ" ಜನಾಂಗದ ಆಚಾರ ವಿಚಾರ ಊಟ ಉಪಚಾರಗಳ ಪರಿವರ್ತನೆ ಮುಂತಾದುವುಗಳಲ್ಲಿ ಕೆಲವು ಅಂಶಗಳು ಗಮನಾರ್ಹವಾಗಿವೆ.

ಕಾಪಲಿಗಳು ಕಾಲ ಭೈರವನ ಉಪಾಸಕರಾಗಿದ್ದಾರೆ. ಅವರು ಮದ್ಯ ಮಾಂಸಗಳನ್ನು ಸೇವಿಸುವವರು. ಇದರಿಂದಲೇ ದ್ರಾವಿಡನಾಡು, ಆಂಧ್ರ, ಗಂಗಾವಾಡಿಯಲ್ಲಿ ಶಿವ, ಆದಿಶಕ್ತಿ, ಚಂಡಿಕಾಪೂಜೆಗೆ ಪ್ರಾಶಸ್ತ್ಯ ಹೆಚ್ಚಿದುದು ಮತ್ತು ಪ್ರಾಣಿ ಬಲಿಯ ಪೂಜೆ ಹೆಚ್ಚಾದುದು. 9-10ನೇ ಶತಮಾನದಲ್ಲಿ ಕಾಳಮುಖಿಗಳ ಪ್ರಭಾವ ಗಂಗಾವಾಡಿಯಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿತ್ತು. ಇವರ ಜೊತೆಗೂಡಿಯೇ ಪುರೋಹಿತವರ್ಗದಿಂದ ಮತ್ತೆ ಯಜ್ಞಯಾಗಾದಿಗಳೂ ಉತ್ತೇಜನ ಪಡೆದವು. ಮಾಂಸಹಾರವು ಸರ್ವಸಾಮಾನ್ಯವಾದ ಊಟದ ಪದಾರ್ಥವಾಯಿತು. ರಾಜಾಧಿರಾಜರೂ ಕೂಡ ತಮ್ಮ ಅರಮನೆಯಲ್ಲಿ ಮಾಂಸಹಾರವನ್ನು ಧಾರಾಳವಾಗಿ ಬಳಸುತ್ತಿದ್ದರು. ಅರಮನೆಯಲ್ಲಿ ರುಚಿರುಚಿಯಾದ ಮಾಂಸದ ಭಕ್ಷಣೆಯನ್ನು ಮಾಡುವವನಿಗೆ "ಮಾಂಸಪಾಕ ವಿಶಾರದ"ನೆಂಬ ಬಿರುದು ದೊರೆಯುತ್ತಿತ್ತು.

"ಯಥಾರಾಜಾ ತಥಾಪ್ರಜಾ" ಇನ್ನು ಸಾಮಾನ್ಯ ಜನರ ಪಾಡೇನು. ಜೈನ ಧರ್ಮದ ಅವನತಿಯಿಂದ, ಕಾಪಾಲಿ ಕಾಳಮುಖಿ ಮುಂತಾದ ಮತ ಪ್ರಚಾರಕರ ಪ್ರಭಾವದಿಂದ, ರಾಜಾಧೀಶರಾಜರ, ಶ್ರೀಮಂತರ ಆಚರಣೆಯಿಂದ ಗೌಡ ಸಮಾಜದ ಒಕ್ಕಲಿಗ ಜನಾಂಗದವರೂ ಮದ್ಯಮಾಂಸಗಳನ್ನು ಸೇವಿಸತೊಡಗಿದರೆಂದರೆ ಆಶ್ಚರ್ಯವಿಲ್ಲ.

ಪೌರಾಣಿಕ ಹಿನ್ನೆಲೆ

ತಾ॥ 17-10-1912ರಲ್ಲಿ ಮಂಗಳೂರು ಕದ್ರಿಮಠದ ಗುರುಗಳು ಶ್ರೀ ಶ್ರೀ ಟೀಲನಾಥಜೀ ಸ್ವಾಮಿಗಳು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಮಡ್ಡೀಕೆರೆ ಗ್ರಾಮದ ದಿ॥ ಈರೇಗೌಡರಿಗೆ ಬರೆದಿರುವ ಪತ್ರದಿಂದ ಆಯ್ದುಕೊಳ್ಳಲಾಗಿದೆ.

ಸ್ಕಾಂಧ ಪುರಾಣದ-ಸೈಯಾದ್ರಿ ಖಂಡ ಮುವ್ವತ್ತೆರಡನೆಯ ಅಧ್ಯಾಯ ಸೋಮವಂಶದ ಉತ್ಪತ್ತಿಯನ್ನು ವರ್ಣಿಸುತ್ತದೆ. ಕ್ಷತ್ರಿಯರ ಉತ್ಪತ್ತಿ 32-33ನೇ ಅಧ್ಯಾಯದವರೆಗೆ ವಿವರವಿದೆ. ಕೊಲಂಬಾ ದೇವಿಯ ಭಕ್ತರಾಗಿ ಇರತಕ್ಕ ಪ್ರಿಯ ಋಷಿ ಗೋತ್ರದಲ್ಲಿ ಹುಟ್ಟಿದಂಥ ಪ್ರಥಮ ಪುತ್ರನು ಜಗನು ಎಂಬುವನು.

ತೃತೀಯ ಪುತ್ರ ಸೇಲರಾಜನು, ಈತನ ಪುತ್ರ ಗೌಡರಾಜ, ಈತನ ಪುತ್ರ, ಗೋಚರ ಈತನ ಪುತ್ರ ಅನ್ಮೃತ ಪ್ರಿಯ, ಈತನ ಪುತ್ರ ಶಿಖಂಡಿ, ಈತನ ಪುತ್ರ ಕರ್ಕಶ, ಈತನ ಪುತ್ರ ಶುಕ, ಈತನ ಪುತ್ರ ಚಾರಣ, ಈತನ ಪುತ್ರ ಚಂಡ ಹೀಗೆ ಒಕ್ಕಲಿಗ ಗೌಡರುಗಳು ಕ್ಷತ್ರಿಯ ಕುಲದ ಸೋಮವಂಶದಲ್ಲಿ ಜನಿಸಿದ್ದಾರೆ. ಇವರ ಮೂಲ ಪುರುಷ ಗೌಡರಾಜ ಎಂದು ಬರೆದಿರುತ್ತಾರೆ.

ಈ ಪತ್ರದ ಅಸಲು ಪ್ರತಿ ಈರೇಗೌಡರ ಮಗ ಬಾಸೇಗೌಡರ ಬಳಿ ಇದೆ ಹಾಗೂ ಮಠದ ಮುದ್ರೆಸ್ವಾಮಿಗಳ ಹಿಂದಿ ಲಿಪಿಯ ದಸ್ಕತ್ತು ಇದೆ.

ಉಪ ಸಂಹಾರ

ಆರ್ಯರ ಆಗಮನಕ್ಕಿಂತ ಹಿಂದೆ ಅತೀ ಪ್ರಾಚೀನ ಭಾರತದ ಸಂಸ್ಕೃತಿಯ ನಿಲುವು ಏನೆಂಬುದು ಸಂಶೋಧಕರ ದೃಷ್ಟಿಯಲ್ಲಿ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಅನಾರ್ಯರು ಸುಸಂಸ್ಕೃತರಾಗಿದ್ದರು ಎಂಬುದು ಹರಪ್ಪ, ಮಹಂಜೋದಾರೋ ಮುಂತಾದ ಕಡೆ ಇತ್ತೀಚಿನ ಭೂ ಉತ್ಖನನದಿಂದ ದೊರೆತ ಕಲಾತ್ಮಕವಾದ ವಸ್ತುಗಳಿಂದಲೂ ಇವರ ಪಟ್ಟಣಗಳಿಂದಲೂ ಸ್ಥಿರಪಟ್ಟಿದೆ. ಮಹಂಜೋದಾರದಲ್ಲಿ ದೊರೆತಿರುವ ಒಂದು ಕೆತ್ತನೆಯಲ್ಲಿ ವೃಷಭನ ಕೊಂಬುಗಳೂ ತಲೆಯಲ್ಲಿ ಧರಿಸಿರುವ ದೇವತಾ ವಿಗ್ರಹವೂ ದೊರೆತಿವೆ. ಅದರ ಎಡ

ಬಲಗಳಲ್ಲಿ ವೃಷಭ-ವ್ಯಾಘ್ರ ಮುಂತಾದ ಪ್ರಾಣಿಗಳ ಚಿಹ್ನೆ ಇರುವುದರಿಂದ ಇದು "ಪಶುಪತಿ" ಅಥವಾ ಶಿವನ ವಿಗ್ರಹವೆಂದು ಪರಿಣಿತರು ಭಾವಿಸಿರುತ್ತಾರೆ. ಕಾಶ್ಮೀರದ ದುರ್ಗಮ ಪರ್ವತ ಪ್ರಾಂತ್ಯದಲ್ಲಿನ "ಅಮರನಾಥ್" ಗುಹೆಯಲ್ಲಿ ಜಗತ್ ಸೃಷ್ಟಿಯೊಂದಿಗೆ, ಕೇವಲ ಹಿಮದಿಂದಲೇ ಉದ್ಭವವಾಗುತ್ತಿರುವ ಶಿವಲಿಂಗವು ಆಧುನಿಕ ವೈಜ್ಞಾನಿಕರಿಗೆ ಒಂದು ಸವಾಲಿನಂತಿದೆ. ಇದರಿಂದ ಭಾರತೀಯ ಸಂಸ್ಕೃತಿಯ ಉಗಮ ಹಾಗೂ ಶಿವಾರಾಧನೆಯ ಪ್ರಾಚೀನತೆ ಹತ್ತಾರು ವರ್ಷಗಳಷ್ಟು ಹಿಂದಿನದಾಗುತ್ತದೆ.

ಈ ಪುರಾತನ ಸಂಸ್ಕೃತಿ ಆರ್ಯರ ಸತತ ಧಾಳಿಯಿಂದಲೂ ನಾಶವಾಗಲಿಲ್ಲ. ಪ್ರತಿಯಾಗಿ ಹರಿ-ಹರರಲ್ಲಿ ಭೇದವನ್ನೆಣಿಸದಂತೆ ಸಮಾನ ಸ್ಥಾನ ಮಾನವನ್ನಿತ್ತು ತಮ್ಮ ವೇದ–ವೇದಾಂಗಗಳ ವಿನಿಮಯ ಮಾಡಿಕೊಂಡರು. ಆದರೂ ಅವಧೂತ ಯೋಗಿಗಳು ಅತಿ ಪ್ರಾಚೀನ ಭಾರತದ ತಮ್ಮ ಸಂಸ್ಕೃತಿಯನ್ನು ಅದರ ಮೂಲ ಸ್ವರೂಪದಲ್ಲಿ ಉಳಿಸಿಕೊಂಡುಬರಲು ಅಪಾರ ತ್ಯಾಗ ಮಾಡಿದ್ದಾರೆ.

ಚೇಳರು ಇತರ ಅನಾರ್ಯರಾದ ದಾಸ–ದಸ್ಯು-ಪುಡ್ರ-ಕಿರಾತ ಮುಂತಾದ ವೈದೀಕವಲ್ಲದ ಭಿನ್ನ ಆಚಾರ ಆರಾಧನೆಗಳುಳ್ಳ ಜನರಂತೆಯೇ ಪ್ರತ್ಯೇಕ ಜನಾಂಗವಾಗಿದ್ದು, ಅವಧೂತ ಯೋಗಿಗಳ ಶಿಷ್ಯ ವರ್ಗಕ್ಕೆ ಸೇರಿದವರಾಗಿದ್ದರು. ಇವರು ತಮ್ಮಧರ್ಮದ ಉಳಿವಿಗಾಗಿ ಆರ್ಯರೊಡನೆ ಸತತ ಹೋರಾಡುತ್ತ ಹಿಮ್ಮೆಟ್ಟಿ, ದಕ್ಷಿಣದ ಕಡೆ ಧಾಳಿ ಇಟ್ಟರು. ಇವರ ಗುರು ಪುರೋಹಿತರಾದ ಶೈವಾಗಮದ ಆಚಾರ್ಯರು ಹಿಮಾಲಯದ ಪವಿತ್ರ ಕ್ಷೇತ್ರಗಳಲ್ಲಿ ಆಶ್ರಯ ಪಡೆದರು.

ಇತ್ತ ಚೇಳರ ಪ್ರಭಾವಕ್ಕೆ ಸಿಲುಕಿ ಹಿಂದೂ ಧರ್ಮದಲ್ಲಿಯೇ ಬೌದ್ಧ, ಜೈನ ಧರ್ಮಗಳ ಪ್ರಭಾವದಿಂದ ವೈದಿಕ ಧರ್ಮ ಅಳಿಯುತ್ತಿತ್ತು. ಈ ಸಂದರ್ಭದಲ್ಲಿಯೇ ಅವಧೂತ ಯೋಗಿಗಳು ಮತ್ತೆ ಸಮಯ ಕಾದು ಚೋಳರ ಆಶ್ರಯವನ್ನು ಪಡೆದು ದಕ್ಷಿಣಾ ಪಥದಲ್ಲಿ ಜೈನ, ಬೌದ್ಧ ಧರ್ಮಗಳನ್ನು ನಾಮಾವಶೇಷ ಮಾಡಿ ಪುನಃ ತಮ್ಮ ಪ್ರಾಚೀನ ಸಂಸ್ಕೃತಿಯನ್ನು ಬಿತ್ತಿ ಬೆಳೆಸಿದರು.

ಇದರಿಂದ ಚೇಳರು ರಟ್ಟರಾಗಿ, ಮತ್ತೆ ಗಂಗರಾಗಿ ತಮ್ಮ ಪೂರ್ವಾಶ್ರಮದ ಕಕ್ಷೆಯಲ್ಲಿ ಸೇರಿ ರೆಡ್ಡಿಯವರೂ ಗಂಗಡಿಕಾರ ಒಕ್ಕಲಿಗರೂ ಆಗಿರುತ್ತಾರೆ. ಇವರು ಯಾವಾಗಲೂ ಆರ್ಯರ ವೈದಿಕ ಧರ್ಮದ ಚತುರ್ವರ್ಣಗಳಲ್ಲಿ ಸೇರಿದವರಾಗಿರಲಿಲ್ಲ.

ನಾಮಧಾರಿ ಒಕ್ಕಲಿಗ ಗೌಡರು

ಒಕ್ಕಲಿಗ ಜನಾಂಗದಲ್ಲಿ ಶ್ರೀ ವೈಷ್ಣವ ಸಂಪ್ರದಾಯದ "ನಾಮಧಾರಿಒಕ್ಕಲಿಗರು" ಎಂಬ ಒಳಪಂಗಡವಿರುವುದನ್ನು ನನ್ನ "ಒಕ್ಕಲಿಗರು" ಎಂಬ ಕಿರುಹೊತ್ತಿಗೆಯಲ್ಲಿ ಪ್ರಸ್ತಾಪಿಸಿರುತ್ತೇನೆ. ಇತ್ತೀಚಿನ ಪರಿಶೋಧನೆಯಿಂದ ಇವರ ಕುರಿತು ಹೊಸ ಹೊಸ ವಿಷಯಗಳನ್ನು ಬೆಳಕಿಗೆ ತರಲು ಸಾಧ್ಯವಾಯಿತು. ಅದರ ವಿವರಗಳನ್ನು ಕುಲಬಾಂಧವರ ವಿಮರ್ಶೆಗೆ ವಿಸ್ತರಿಸಿದ್ದೇನೆ.

"ನಾಮಧಾರಿ ಒಕ್ಕಲಿಗರು" ಶಿವಮೊಗ್ಗ ಜಿಲ್ಲೆಯ ಮಲೆನಾಡು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಶೃಂಗೇರಿ, ಕೊಪ್ಪ ತಾಲ್ಲೂಕುಗಳು, ಮೂಡಿಗೆರೆಯ ಕಳಸ, ಬಾಳೂರು ಹೋಬಳಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ ಬೆಳ್ತಂಗಡಿ ತಾಲ್ಲೂಕುಗಳು ಮತ್ತು ಕೊಡಗು ಮುಂತಾದ ಕಡೆ ಹೆಚ್ಚಾಗಿಯೂ, ಬಯಲು ಸೀಮೆಯ ನಾಗಮಂಗಲ, ಕುಣಿಗಲ್, ಬೇಲೂರು, ಪಿರಿಯಾಪಟ್ಟಣ, ಕಡೂರು ತಾಲ್ಲೂಕುಗಳು ಮತ್ತು ಬೆಂಗಳೂರು ಸಿಟಿಯಲ್ಲಿ ವಿರಳವಾಗಿಯೂ ಕಂಡುಬರುತ್ತಾರೆ.

ಆಧ್ಯಾತ್ಮಿಕ ವಿಚಾರವೇದಿಕೆಯಲ್ಲಿ "ಶ್ರೀ ವೈಷ್ಣವ" ಹಾಗೂ "ವೀರಶೈವ"ರಲ್ಲಿ ನಡೆದ ವಾದ ವಿವಾದ ಒಕ್ಕಲಿಗ ಜನಾಂಗದಲ್ಲಿಯೂ ತಪ್ಪಿದಂತೆ ಕಾಣಲಿಲ್ಲ. ಒಕ್ಕಲಿಗರಲ್ಲಿ ಶೈವರು ನಾವು ಮೇಲು, ವೈಷ್ಣವರು ನಾವು ಮೇಲು,ಎಂಬ ವಾದ ದೂರದ ಕಿವಿಮಾತಾಗಿ ಇನ್ನೂ ಉಳಿದಿದೆ. ಈ ಜಿಜ್ಞಾಸೆಯ ಪರಮಾವಧಿಯಲ್ಲಿ ಅನೇಕ ಒಕ್ಕಲಿಗ ಗೌಡ ಸಮಾಜದ ಕುಟುಂಬಗಳು ಲಿಂಗ ಧಾರಣೆ ಮಾಡಿಕೊಂಡು, ಮದ್ಯ ಮಾಂಸಗಳನ್ನುವರ್ಜಿಸಿ, ವೀರಶೈವರೇ ಆದರು. ಆದರೆ ಮಲೆನಾಡು ಪ್ರಾಂತ್ಯದಲ್ಲಿ ಶೈವ ನಾಮಧಾರಿಯೆಂಬುದು ಆಚರಣೆಯಲ್ಲಿದೆಯೇ ವಿನಃ ಬಾಂಧವ್ಯಬೆಳೆಸುವಲ್ಲಿ ಯಾವ ತೊಡಕನ್ನೂ ಉಂಟುಮಾಡಿಲ್ಲ. ಅನೇಕ ತಲೆ ಮಾರುಗಳಿಂದ ಉಭಯ ಪಂಗಡಗಳಲ್ಲಿಯೂ ಬಾಂಧವ್ಯ ನಡೆಸುತ್ತಾ ಬಂದು ಈಗ ಶೈವ, ವೈಷ್ಣವ ಎಂಬ ಭೇಧ ಭಾವನೆಯೇ ಅಳಿಸಿಹೋಗಿದೆ.

ನಾಮಧಾರಿ ಒಕ್ಕಲಿಗರ ಪಂಗಡ ಅನಾದಿಯೆಂದು ನನಗೆ ಅನಿಸುತ್ತಿಲ್ಲ. ಇದುವರೆಗಿನ ದಾಖಲೆಗಳ ಸಾಧನದಿಂದ ಹೀಗೆ ಹೇಳಬಹುದು.

"ವಿಶಿಷ್ಟಾದ್ವೈತ ಶ್ರೀ ವೈಷ್ಣವ" ಮತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು ಶೈವ ಧರ್ಮಕ್ಕೆ ಆಶ್ರಯದಾತರಾದ ಚೋಳರಾಜರ ಕಿರುಕುಳವನ್ನು ಸಹಿಸಲಾರದೆ ಮೈಸೂರು ದೇಶಕ್ಕೆ ಬಂದರು.

(ಮುಂದಿನ ಸಂಚಿಕೆಗೆ)

ಪಾಠ ಕಲಿತ ಮೂರ್ಖ

ದೇವಿ ತುಳಜಾಭವಾನಿಯ ಭಕ್ತನಾದ ಪಂಡಿತನೊಬ್ಬನಿದ್ದ. ದೇವಿಯ ಪ್ರತಿರೂಪವೆಂದೇ ತಿಳಿದು ದಿನವೂ ತುಳಸಿ ಗಿಡವನ್ನು ಪೂಜಿಸುತ್ತಿದ್ದ. ತುಳಸಿ ಗಿಡವು ಎಲ್ಲಿ ಕಂಡರೂ ಮಂತ್ರ ಹೇಳಿ ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡದೆ ಮುಂದೆ ಹೋಗುತ್ತಿರಲಿಲ್ಲ.

ಒಮ್ಮೆ ಪಂಡಿತನಿಗೆ ಪರವೂರಿಗೆ ಹೋಗಬೇಕಾಯಿತು. ಹೆಚ್ಚು ದೂರವಿಲ್ಲದರಿಂದ ಅಡ್ಡದಾರಿ ಹಿಡಿದು ಕಾಲ್ನಡಿಗೆಯಲ್ಲಿಯೇ ಪ್ರಯಾಣ ಹೊರಟ. ದಾರಿಯಲ್ಲಿ ಅವನಿಗೆ ಅದೇ ಊರಿಗೆ ಹೊರಟಿದ್ದ ಇನ್ನೊಬ್ಬ ಜೊತೆಯಾದ. ಅವನೊಬ್ಬ ಸಜ್ಜನರಲ್ಲಿ ಗೌರವವಾಗಲೀ, ದೇವರಲ್ಲಿ ಭಕ್ತಿಯಾಗಲೀ ಇಲ್ಲದ ಶತಮೂರ್ಖ. ಪಂಡಿತನಿಗೆ ಅವನ ಮೂರ್ಖತನದ ಅರಿವಿದ್ದರೂ ಬೇರೆ ಉಪಾಯವಿಲ್ಲದೆ ಮನಸ್ಸಿಲ್ಲದ ಮನಸ್ಸಿನಿಂದ ಅವನೊಡನೆ ಮುಂದೆ ಸಾಗಬೇಕಾಯಿತು.

ಹೀಗೆ ಮುಂದೆ ಸಾಗುವಾಗ ದಾರಿಯ ಬದಿಯಲ್ಲಿ ಹುಲುಸಾಗಿ ಬೆಳೆದಿದ್ದ ತುಳಸಿಗಿಡವೊಂದು ಪಂಡಿತನ ಕಣ್ಣಿಗೆ ಬಿತ್ತು. ತುಳಸಿಗಿಡವನ್ನು ಕಂಡಮೇಲೆ ಮಂತ್ರ ಹೇಳಿ, ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡದೇ ಮುಂದೆ ಹೋಗುವವನಲ್ಲ. ತಾನು ತುಳಜಾಭವಾನಿಗೆ ನಮಸ್ಕರಿಸಿ ಬರುವುದಾಗಿಯೂ, ಮೂರ್ಖನು ಮುಂದೆ ಸಾಗಬಹುದೆಂದೂ ಹೇಳಿದ ಪಂಡಿತ ಕೈಕಾಲು ಮುಖ ತೊಳೆಯಲು ಅಲ್ಲಿಯೇ ಹರಿಯುತ್ತಿದ್ದ ಝರಿಯ ಕಡೆಗೆ ಹೋದ. ಆದರೆ ಈಪಂಡಿತ ಏನೇನು ಮಾಡುತ್ತಾನೋ ನೋಡಿಬಿಡಬೇಕೆಂದು ಮೂರ್ಖ ಮುಂದೆ ಹೋಗದೆ ಅಲ್ಲೆ ಇದ್ದ ಕಲ್ಲಿನ ಮೇಲೆ ಕುಳಿತ.

ಕೈಕಾಲು ಮುಖ ತೊಳೆದುಕೊಂಡು ಬಂದ ಪಂಡಿತನಿಗೆ ಮೂರ್ಖ ಅಲ್ಲೇ ಕುಳಿತಿರುವುದು ಹಿಡಿಸದಿದ್ದರೂ ಬೇರೆ ದಾರಿ ಕಾಣದೆ ಮಂತ್ರ ಹೇಳುತ್ತಾ ಆ ತುಳಸಿ ಗಿಡಕ್ಕೆ ಮೂರುಬಾರಿ ಪ್ರದಕ್ಷಿಣೆ ಹಾಕಿ ಗಿಡದ ಮುಂದೆ ಅಡ್ಡಬಿದ್ದ. ದೇವರಲ್ಲಿ ನಂಬಿಕೆಯಾಗಲಿ, ಭಕ್ತಿಯಾಗಲಿ ಇಲ್ಲದ ಮೂರ್ಖನಿಗೆ ಪಂಡಿತ ಮಾಡಿದುದೆಲ್ಲ ತುಂಬ ತಮಾಷೆಯಾಗಿ ಕಂಡಿತು. ಮೂರ್ಖನಲ್ಲವೇ ? ಪಂಡಿತನನ್ನು ಹಾಸ್ಯಮಾಡಲು ಕೆಣಕಿದ, "ಪಂಡಿತರೆ ಈ ಹಾಳುಗಿಡದಲ್ಲಿ ಏನಿದೆಯೆಂದು ಸುತ್ತುಬಂದುಅಡ್ಡಬಿದ್ದಿರಿ ನೀವು" ?. ಈ ಮಾತುಗಳನ್ನು ಕೇಳಿ ಪಂಡಿತನಿಗೆ ಸಹಿಸಲಾಗದ ದುಃಖವಾದರೂ ತೋರಿಸಿಕೊಳ್ಳದೆ ಹೇಳಿದ, "ಇದು ಬರೀ ಗಿಡವಲ್ಲ, ನನ್ನ ಆರಾಧ್ಯ ದೇವಿಯಾದ ತುಳಜಾಭವಾನಿಯ ಪ್ರತಿರೂಪ. ಬೇಡಿದ ವರವನ್ನು ನೀಡುವಳು". ಪಂಡಿತನ ಮಾತುಗಳನ್ನು ಕೇಳಿ ಮೂರ್ಖನಿಗೆ ಅವನನ್ನು ಅವಹೇಳನ ಮಾಡಬೇಕೆನಿಸಿತು. ಎದ್ದುಹೋಗಿ ಆ ತುಳಸಿ ಗಿಡದ ಎಲೆಗಳನ್ನೆಲ್ಲ ಕಿತ್ತು ಮೈ ಕೈ ಮೇಲೆ ತಿಕ್ಕಿಕೊಂಡು, ಈ ಗಿಡದಲ್ಲಿ ಇರುವ ನಿನ್ನ ದೇವಿ ನನ್ನ ಮೈಮೇಲೆ ಬರಲಿ, ನನಗೆ ವರ ಕೊಡಲಿ" ಎಂದ. ಗಿಡವನ್ನೆಲ್ಲ ಒದ್ದು ಒದ್ದು ಪುಡಿ ಮಾಡಿ ಗಹಗಹಿಸಿ ನಗಹತ್ತಿದ. ಪಂಡಿತನಿಗೆ ತುಂಬಾ ದುಃಖವಾಯಿತು. ಜ್ಞಾನಿಗಳು ತಮ್ಮ ದುಃಖವನ್ನು ಬೇರೆಯವರ ಮುಂದೆ ತೋರಿಸಿಕೊಳ್ಳುವುದಿಲ್ಲ. ಮೌನವಾಗಿ ಸಹಿಸಿಕೊಳ್ಳುತ್ತಾರೆ. ಆದರೆ ಸಮಯ ಬಂದಾಗ ತಮಗೆ ದುಃಖ ನೀಡಿದವರಿಗೆ ಪಾಠ ಕಲಿಸದೆ ಬಿಡುವವರೂ ಅಲ್ಲ. ಪಂಡಿತ ದುಃಖವನ್ನು ನುಂಗಿಕೊಂಡು ಮೌನವಾಗಿ ಮುಂದೆಸಾಗಿದ. ಮೂರ್ಖನು ಹಿಂಬಾಲಿಸಿದ.

ಅವರು ಸೇರಬೇಕಾಗಿದ್ದ ಊರು ಸಮೀಪಿಸಿತು. ಅಲ್ಲಿ ಅಂಗರೆಗಿಡಗಳು (ತುರಿಕೆ ಸೊಪ್ಪಿನ ಗಿಡಗಳು) ಹುಲುಸಾಗಿ ಬೆಳೆದಿದ್ದವು. ಅವುಗಳನ್ನು ಕಂಡ ಪಂಡಿತ ಮೂರ್ಖನಿಗೆ ಪಾಠ ಕಲಿಸಲು ಯೋಚಿಸಿದ. ಮೂರ್ಖನಿಗೆ ನೋಡು, ಈ ಗಿಡಗಳೂ ತುಳಜಾ ಭವಾನಿಯ ಇನ್ನೊಂದು ರೂಪ. ನಾನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಬರುತ್ತೇನೆ. ನೀನು ಊರೊಳಗೆ ಹೋಗು" ಎಂದು ಹೇಳಿ ಕೈಕಾಲುಗಳನ್ನು ತೊಳೆದುಕೊಂಡು ಬರುವನಂತೆ ನಟಿಸುತ್ತಾ ಅಲ್ಲೆ ಇದ್ದ ಕೆರೆಯ ಕಡೆ ಹೋದ. ಮೂರ್ಖ ಅಲ್ಲಿಯೇ ಕುಳಿತ. ಹಿಂದೆ ಬಂದಾಗ ಮೂರ್ಖ ಅಲ್ಲೇ ಇರುವುದನ್ನು ಕಂಡು ಪಂಡಿತನಿಗೆ ಖುಷಿಯಾಯಿತು.

ಒಂದು ಹುಲುಸಾಗಿ ಬೆಳೆದ ಅಂಗರೆಗಿಡಕ್ಕೆ ಪಂಡಿತ ಮೂರು ಸುತ್ತುಹಾಕಿ ಅಡ್ಡಬಿದ್ದ. ಇದನ್ನೆಲ್ಲ ನೋಡುತ್ತಿದ್ದ ಮೂರ್ಖನಿಗೆ "ಈ ಗಿಡದ ಎಲೆಗಳನ್ನು ಬಟ್ಟೆ ತೆಗೆದು ಮೈತುಂಬ ತಿಕ್ಕಿಕೊಂಡರೆ ಮೈಮೇಲೆ ದೇವಿಯ ದರ್ಶನ ಬರುವುದು ಖಂಡಿತ" ಎಂದ. ಮೂರ್ಖರ ಬುದ್ಧಿ ಮಂದ. ಅವರ ಯೋಚನೆಯ ದಿಕ್ಕು ಸುಲಭವಾಗಿ ಬದಲಾಗದು. ಹಿಂದು ಮುಂದು ಯೋಚಿಸದೆ ಕೆಲಸಕ್ಕೆ ಕೈ ಹಾಕುವುದು ಅವರ ಜಾಯಮಾನ ಪಂಡಿತನ ಮಾತು ಕೇಳಿ ತಟ್ಟನೆದ್ದ ಮೂರ್ಖ ಮೈಮೇಲಿನ ಬಟ್ಟೆ ಕಳಚಿ ಆ ಅಂಗರೆಗಿಡದ ಎಲೆಗಳನ್ನು ಪುಡಿಪುಡಿಯಾಗಿ ಕಿತ್ತು ಮೈತುಂಬ ತಿಕ್ಕಿಕೊಂಡ. ಅವನ ಮೈಮೇಲೆ ಚರ್ಮ

ಕೆಂಪಾಯಿತು. ಮೈಯಲ್ಲಿ ಉರಿಎದ್ದಿತು. ಅಸಾಧ್ಯ ತುರಿಕೆ ಸುರುವಾಗಿ ತಡೆಯಲಾರದೆ ಮೈಕೈ ಪರಚಿಕೊಳ್ಳುತ್ತಾ ಥಕಥೈ ಎಂದು ಕುಣಿಯತೊಡಗಿದ. ಪಂಡಿತನಿಗೆ ತಡೆಯಲಾಗದ ನಗು ಬಂದರೂ ತೋರಿಸಿಕೊಳ್ಳದೆ ಗಂಭೀರವಾಗಿ, "ನಿನ್ನ ಮೈ ಮೇಲೆ ದೇವಿಯ ದರ್ಶನ ಬಂದಿದೆ, ಆದರೆ ಅವಳಿಗೆ ಕೋಪ ಬಂದಿದೆ, ಅವಳ ಕೋಪ ಇಳಿಯಲು ಮೂರುದಿನ ಬೇಕು, ಅಲ್ಲಿಯವರೆಗೂ ಹೀಗೆಯೇ" ಎಂದು ಹೇಳಿ ಮುಂದೆ ಹೊರಟ.

ಅಸಾಧ್ಯ ತುರಿಕೆಯಿಂದ ಪ್ರಾಣವೇ ಹೋಗುವುದೆಂದು ಹೆದರಿದ ಮೂರ್ಖ ತನನ್ನು ಹೇಗಾದರು ಕಾಪಾಡಬೇಕೆಂದು ಪಂಡಿತನನ್ನು ಬೇಡಿಕೊಂಡ. ಪಂಡಿತ ಆ ಊರಿನಲ್ಲಿದ್ದ ದೇವಿಯ ಮಂದಿರಕ್ಕೆ ಮೂರ್ಖನನ್ನು ಕರೆತಂದು, ಮಂದಿರಕ್ಕೆ ಮೂರು ಪ್ರದಕ್ಷಿಣೆ ಹಾಕಿಸಿ, ದೇವಿಯ ಮುಂದೆ ಅಡ್ಡಬೀಳಿಸಿದ. ದೊಡ್ಡ ಧ್ವನಿಯಲ್ಲಿ ದೇವಿಯ ಕ್ಷಮೆ ಕೇಳುವಂತೆ ಹೇಳಿದ. ಮೂರ್ಖ ಹಾಗೆ ಮಾಡಿದ ಮೇಲೆ ಮಂದಿರದ ಒಳಗೆ ಹೋಗಿ ದೇವಿಯ ಮುಂದೆ ಉರಿಯುತ್ತಿದ್ದ ದೀಪದಿಂದ ಎಣ್ಣೆ ತಂದುಕೊಟ್ಟು ಮೈಮೇಲೆಲ್ಲಾ ಸವರಿಕೊಳ್ಳಲು ಹೇಳಿದ. ಎಣ್ಣೆಯ ಪ್ರಭಾವದಿಂದ ತುರಿಕೆ ನಿಂತು ಉರಿ ಕಡಿಮೆಯಾಯಿತು. ಮೂರ್ಖನ ಮೂರ್ಖತನವೂ ಕೊನೆಯಾಯಿತು. ಮುಂದೆ ಅವನು ದೇವಿಯ ಪರಮ ಭಕ್ತನಾಗಿ ಸಜ್ಜನನಾಗಿ ಬಾಳಿಬದುಕಿ ಕೊನೆಯುಸಿರೆಳೆದ. ಜ್ಞಾನಿಗಳ ಸಹವಾಸದಿಂದ ಮೂರ್ಖರೂ ಜ್ಞಾನಿಗಳಾಗುತ್ತಾರೆ. ಪಾಮರರೂ ಪಂಡಿತರಾಗುತ್ತಾರೆ. ಅದಕ್ಕಾಗಿಯೇ "ಸಜ್ಜನರ ಸಂಘವದು ಹೆಜ್ಜೇನು ಸವಿದಂತೆ ಎಂದಿದ್ದಾನೆ ಸರ್ವಜ್ಞ.

● ಬೈತಡ್ಕ ಕೆ. ಹೇಮ,
ಪಾಲೂರು ಗ್ರಾಮ, ಕೊಡಗು.

ತಲೆ ಬುರುಡೆಗಳ ರಾಶಿ

ಅಲ್ಜಿಯರ್ಸ್‌ಗೆ ಪೂರ್ವ ಭಾಗಕ್ಕಿರುವ ಜೆಲ್ಫಾ ಎಂಬಲ್ಲಿ ಮನುಷ್ಯರ ಸುಮಾರು 20 ತಲೆಬರುಡೆಗಳು ಪತ್ತೆಯಾಗಿದ್ದು ಅವುಗಳಲ್ಲಿ ಎರಡು ಮಹಿಳೆಯರದ್ದೆನ್ನಲಾಗಿದೆ.

ಅಲ್ಜಿಯರ್ಸ್‌ಗೆ 250 ಕಿ.ಮೀ. ದೂರದಲ್ಲಿ ಈ ಬರುಡೆಗಳು ಪತ್ತೆಯಾಗಿದ್ದು, ಜೆಲ್ಫಾದ ಶವಾಗಾರಕ್ಕೆ ಅವುಗಳನ್ನು ತರಲಾಯಿತೆಂದು ಅಲ್ಜೀರಿಯಾದ ಪ್ರಮುಖ ಪತ್ರಿಕೆಯಾದ ಎಲ್-ಖಬರ್ ವರದಿ ಮಾಡಿದೆ.

ಐದು ವರ್ಷಗಳ ಹಿಂದೆ ಇಸ್ಲಾಮಿಕ್ ಧರ್ಮ ದಾಳಿ ನಡೆಸಿದ ನಂತರ ತಲೆ ಕತ್ತರಿಸುವುದು ಅವ್ಯಾಹತವಾಗಿ ನಡೆದಿದೆ ಎನ್ನಲಾಗಿದೆ. ತಲೆಬುರುಡೆಗಳು ಯಾವಾಗ ಪತ್ತೆಯಾದವು ಎಂಬುದನ್ನು ಪತ್ರಿಕೆ ಸ್ಪಷ್ಟಪಡಿಸಿಲ್ಲ. ಇಂಥ ವಿಷಯಗಳಲ್ಲಿ ಆಂತರಿಕ ಸಚಿವ ಖಾತೆ ಆಯ್ದ ಕೆಲವನ್ನು ಮಾತ್ರ ಪ್ರಕಟಿಸುತ್ತದೆ.

ಸೇನೆ ಬೆಂಬಲಿತ ಅಲ್ಜೀರಿಯಾ ಸರ್ಕಾರವನ್ನು ಉರುಳಿಸಲು ಮುಸ್ಲಿಮರು ಕತ್ತು ಕೊಯ್ಯುವುದು ಮತ್ತು ತಲೆ ಕತ್ತರಿಸುವಂತಹ ಕೃತ್ಯಗಳನ್ನು ಮಾಡುತ್ತಿವೆ ಎಂದು ಪತ್ರಿಕೆ ವರದಿ ಮಾಡಿದೆ.

ಜೂನ್ 5ರಂದು ಇಲ್ಲಿ ಶಾಸಕಾಂಗ ಚುನಾವಣೆ ನಡೆದಿರುವುದು ಎಷ್ಟರಮಟ್ಟಿಗೆ ಶಾಂತಿ ಕಾಪಾಡುವುದೆಂದು ಕಾದು ನೋಡಬೇಕಾಗಿದೆ. ಮುಸ್ಲಿಮ್ ಧಾಳಿಯ ನಂತರ ದೇಶದಲ್ಲಿ 60,000 ಕ್ಕೂ ಹೆಚ್ಚು ಜನರನ್ನು ಕೊಲೆಮಾಡಲಾಗಿದೆ ಎಂದು ಹೇಳಲಾಗಿದೆ.

ನಾಲಿಗೆ ಸುಡುವ ಕಾಫಿ

ಅಂತರಾಷ್ಟ್ರೀಯ ಕಾಫಿ ಮಾರಾಟ ಕೇಂದ್ರಗಳಾದ ನ್ಯೂಯಾರ್ಕ್-ಲಂಡನ್‌ಗಳಲ್ಲಿ ಕಾಫಿ ಬೆಲೆ ಎರಡು ದಶಕಗಳಲ್ಲಿ ಅತಿ ಹೆಚ್ಚಿನ ಬೆಲೆಯ ಮಟ್ಟವನ್ನು ಮುಟ್ಟಿದಂತೆ ಭಾರತದಲ್ಲೂ ಕಾಫಿ ಬೆಲೆ ಏರುತ್ತಲೇ ಇದೆ. ಕಾಫಿಯ ಸೇವನೆ ಹೆಚ್ಚಾಗಿರುವ ದಕ್ಷಿಣ ಭಾರತ, ಅದರಲ್ಲೂ ತಮಿಳುನಾಡಿನಲ್ಲಿ ಕಾಫಿ ಪುಡಿಯ ಬೆಲೆ ಏರಿಕೆ, ಕಾಫಿ ಕುಡಿದಾಗ ನಾಲಿಗೆಯನ್ನು ಸುಡುವ ಹಂತ ತಲುಪಿದೆ. ಫೆಬ್ರವರಿಯಿಂದ ನಾಲ್ಕು ಬಾರಿ ವಿಮರ್ಶೆಗೆ (ಏರಿಕೆಗೆ) ಒಳಗಾಗಿರುವ ಕಾಫಿಯ ಉತ್ಪಾದನೆ, ಮಾರಾಟ ಕುರಿತಂತೆ ಈಗ ಸರ್ಕಾರದ ನಿಯಂತ್ರಣ ಇಲ್ಲವೇ ಇಲ್ಲ. ಆದರೂ ಕಾಫಿ ಪುಡಿ (ಪರಿಣಾಮವಾಗಿ ಕಾಫಿ ಕಪ್‌ನ) ಬೆಲೆ ಸಾಮಾನ್ಯ ಜನರಿಗೆ ಎಟುಕದೇ ಹೋಗುವ ಸ್ಥಿತಿ ತಲುಪಿದಾಗ ಸರ್ಕಾರಿ ಬೆಂಬಲ ಪಡೆದ ಕಾಫೀ ಮಂಡಳಿ ಸುಮ್ಮನಿರುವುದು ಸಾಧ್ಯವೇ. ಕಾಫಿ ಬಳಕೆದಾರರ ತುಟಿ ಸುಟ್ಟರೆ ಬೆಳೆಗಾರರ ಜೇಬು ತುಂಬುತ್ತಿದೆ. ಈಗಿನ ಅಂದಾಜಿನಂತೆ ಕಾಫಿಯ ಬೆಳೆ (1897-98ಕ್ಕೆ) 2,41,000 ಟನ್‌ಗಳಷ್ಟು. ಅದರಲ್ಲಿ ಕೊಡಗಿನದ್ದೇ 1,68,000 ಟನ್‌ಗಳು.

ಕನ್ನಡ ನಾಡ್

ಬನ್ನಿ ಬನ್ನಿ ಗೆಳೆಯರೆ ಕನ್ನಡ ತಾಯ್ ಮಕ್ಕಳೇ
ಅನ್ನವನ್ನು ಪಡೆಯಲು ನನ್ನಿಯನ್ನೇ ನುಡಿಯಿರಿ
ತಮ್ಮ ತನವ ಬಿಡದೆ ನಡೆವ ಕನ್ನಡ ಕುವರರೆ
ಕೃಷ್ಣದೇವ ಕಂಠೀರವ ಆಳಿದಳದ ನಾಡಿದು

ಕನ್ನಡದ ನಾಡೆಂಬ ಈ ನಂದನ ವನದಲ್ಲಿ
ಏನಿಲ್ಲವೆಂತೆಂಬ ಭಾವ ವಿದೆಯೇ ?
ಅಲ್ಲಿ ನೋಡಲೋ ಗೆಳೆಯ ಕಾವೇರಿಯು
ಸಂತಸದ ನೆಲೆಯಾದ ಪುಣ್ಯ ಭೂಮಿಯು

ಸುತ್ತಲೂ ಹರಡಿರುವ ಹಸುರಿನ ನೋಟವನು
ಕೆತ್ತಿ ಕಡೆದಂತವಳು ನಗಿಸಿ ಹರಿವಳು
ಕನ್ನಡದ ಕಾವೇರಿ ಮುನ್ನಡೆವ ಜಯಭೇರಿ
ಕನ್ನಡಿಯ ತಿಳಿಸೊಬಗು ಆ ಕವೇರನ ಕುವರಿ

ಹಾಲು ಜೇನಿನ ಗೂಡು, ದಂತ ಗಂಧದ ವೀಡು
ಸಾಲುಸಾಲಾಗಿ ನಲಿವ ನವಿಲ ಕಾಡು
ಓ ನನ್ನ ಗೆಳೆಯರೇ ಕನ್ನಡದ ಕುವರರೇ
ಈ ನಿಮ್ಮ ನಾಡನ್ನು, ಕನ್ನಡದ ಬೀಡನ್ನು

ಒಂದಾಗಿ ಕಾಯಿರಿ, ನಾಡಿಗಾಗಿ ದುಡಿಯಿರಿ
ತಾಯ್ನಾಡ ಉಳಿಸಲು ಒಂದಾಗಿ ಮಡಿಯಿರಿ
ಬನ್ನಿ ಬನ್ನಿ ಗೆಳೆಯರೆ ಕನ್ನಡ ತಾಯ್ ಮಕ್ಕಳೇ
ಅನ್ನವನ್ನು ಪಡೆಯಲು ನನ್ನಿಯನ್ನೆ ನುಡಿಯಿರಿ.

● **ಕೆ.ಎ. ಪೊನ್ನಪ್ಪ ಅಡ್ವೊಕೇಟ್, ಮಡಿಕೇರಿ**

ಹೆತ್ತ ತಾಯಿ

ಒಂದು ಮಗುವಿನ ಜನನಕ್ಕೆ ತಂದೆ, ತಾಯಿ ಬೇಕು, ಇದನ್ನು ವಿಜ್ಞಾನದಲ್ಲಿ ಬ್ರೂಣ, ಗರ್ಭವೆನ್ನುತಾರೆ. ಬ್ರೂಣ ಗರ್ಭಕ್ಕೆ ಮುಟ್ಟುವಾಗ ಒಂದು ಸಣ್ಣ ಗುಳ್ಳೆ ಏಳು ದಿವಸದವರೆಗೂ ಅದೊಂದು ಗುಳ್ಳೆ. 15 ದಿವಸದಲ್ಲಿ ಅದೊಂದು ಕವಚಾಕಾರ (Embryo) 30 ದಿವಸದಲ್ಲಿ ಕೋಶ (Foetus) 60 ದಿವಸದಲ್ಲಿ ಮಗುವಿನ ತಲೆ ರೂಪುಗೊಳ್ಳುತ್ತದೆ. 210 ದಿವಸದಲ್ಲಿ ಜೀವಕಳೆ ಬರುವುದು. 240 ದಿವಸದಲ್ಲಿ ಪೂರ್ತಿ ಶರೀರವಾಗುವುದು. ಹೆಚ್ಚು ಕಡಿಮೆ 270 ದಿವಸಗಳಲ್ಲಿ ಪರಿವರ್ತನೆ, ಪೋಷಣೆ, ನೋವು, ನಲಿವು ಅನುಭವಿಸುವವಳು ಜನ್ಮ ಕೊಟ್ಟ ಧರ್ಮದ ತಾಯಿ.

ಮಗು ಮೊಟ್ಟಮೊದಲು ಗುರುತಿಸುವುದು ಹೆತ್ತತಾಯಿಯನ್ನು, ಮೊಟ್ಟ ಮೊದಲ ಆಹಾರ ತಾಯಿಯ ಮೊಲೆಹಾಲು. ಇಷ್ಟು ತಿಳಿಯಲು ಹುಟ್ಟಿದ ಮಗುವಿಗೆ ವಿದ್ಯೆ ಇಲ್ಲ, ಅಕ್ಷರಭ್ಯಾಸವಿಲ್ಲ. ಆದರೂ ಗುರುತಿಸುವುದು. ಇದು ಹೇಗೆ ಸಾಧ್ಯ ? ಇಲ್ಲಿಯೇ ದೈವ ಕೃಪೆ ನಮಗೆ ಅರ್ಥವಾಗುವುದು.

ತಾಯಿ ನಿದ್ರೆ ಮಾಡದೆ ಇರಬಹುದು. ಆದರೆ ಮಗುವನ್ನು ನಿದ್ದೆಮಾಡಿ ಸುತ್ತಾಳೆ. ತೊಟ್ಟಿಲನ್ನು ತೂಗುತ್ತಾಳೆ. ಹಾಡು ಹೇಳುತ್ತಾಳೆ. ಮಗುವಿಗೆ ತೂಗುವುದೇನೆಂದು ತಿಳಿಯದು, ಹಾಡು ಏನು ? ಅದರ ತಾಳ ಎಂತಾದ್ದು, ಕೃತಿ ಎಂತಾದ್ದು ಎಂಬ ಅರಿವಿಲ್ಲ. ತಾಯಿ ತೂಗುತ್ತಾಳೆ, ಹಾಡುತ್ತಾಳೆ ಅದನ್ನು ಆಲಿಸಿ, ಪಾಲಿಸಿ ಮಗು ನಿದ್ರಿಸುತ್ತದೆ. ಇದೇ ತಾಯಿ, ಮಗುವಿನ ಅನ್ಯೋನ್ಯ ಪ್ರೀತಿಯ ಭಾಂಧವ್ಯ. ಇದು ತಂದೆಯಿಂದ ಆಗದ ಕೆಲಸ. ಮಗು ತಾಯಿಯನ್ನು ತಾನಾಗಿ ಗುರ್ತಿಸುತ್ತದೆ ಆದರೆ ತಂದೆಯನ್ನು ಗುರ್ತಿಸಬೇಕಾದರೆ ತಾಯಿ ಹೇಳಿಕೊಡಬೇಕು. ಇದೇ ತಂದೆ ಮತ್ತು ತಾಯಿಗಿರುವ ಭೇದ, ಇದು ಭೇದ ಅಲ್ಲ ಅಂತರ.

ತಾಯಿ ಅಥವಾ ಅವ್ವ ಎಂದರೆ ಅದೊಂದು ಹೆಣ್ಣು. ಮಗುವಿನ ಜನನವಿಲ್ಲದೆ ತಾಯಿ ಇಲ್ಲ. ಹೆಣ್ಣು ಮಗುವಿನ ಜನನವಿಲ್ಲದೆ ತಾಯಿ ಅಲ್ಲ. ಹೆಣ್ಣು ಎಂದರೆ ಅದೊಂದು ಅದ್ಭುತ ಶಕ್ತಿ, ಸೌಂದರ್ಯ, ಪ್ರೀತಿ, ತ್ಯಾಗಗಳ ಮೂರ್ತಿ.

ರಾಮ, ಕೃಷ್ಣ, ಶಿವ, ಇವರೆಲ್ಲರು ಜನಿಸಿದ್ದು, ಹೆಣ್ಣಿಂದ. ನಾವೂ ಜನಿಸುವುದು ಹೆಣ್ಣಿಂದ. ಹೆಣ್ಣು ಅಂದರೆ ಅದೊಂದು ಪ್ರೀತಿ, ತ್ಯಾಗ, ಶಾಂತಿ, ನೀತಿ ಕಾಂತಿಯ ಮೂರ್ತಿ. ಆದ್ದರಿಂದ ಮುಂಜಾನೆ, ಸಂಜೆ ದೀಪ ಹತ್ತಿಸಿದ ಕೂಡಲೇ ಸ್ತುತಿಸಬೇಕಾದದ್ದು ಹೆತ್ತ ತಾಯಿಯನ್ನು. ಹೆಣ್ಣೇ ಧರ್ಮ ಪತ್ನಿ, ಗೃಹಲಕ್ಷ್ಮಿ, ಅರ್ಧಾಂಗಿ ಅದೇ ಲಕ್ಷ್ಮಿ.

ಹೆಣ್ಣು ಎಂದಾಗ ಇದೆಲ್ಲಾ ಕಣ್ಣಮುಂದೆ ನಲಿದಾಡುವುದು. ಹೆಣ್ಣು ಮಗು ಹೆತ್ತನೆಂಬ ಚಿಂತೆಯೇ ನಿಮಗೆ ಚಿತೆಯಾಗಬಹುದು. ವಂಶ ಉದ್ಧಾರ ಹೆಣ್ಣಿಂದ, ವಂಶನಾಶ ಹೆಣ್ಣಿಂದ ಇದು ಹಿರಿಯರ ಅನುಭವ.

ಮನುಷ್ಯ ಜನ್ಮದಲ್ಲಿ ಮೊದಲ ವಂದನೆ ತಾಯಿಗೆ. ಇತರರನ್ನು ಗೌರವಿಸು. ತಾಯಿ ಎಂಬಾಕೆ ತಂದೆಗೆ ಮಾತ್ರ ಹೆಂಡತಿ. ಇತರರಿಗೆಲ್ಲಾ ಮಾತೆ. ಈ ಭಾವನೆಯೇ ನಮಗೆ ಖ್ಯಾತಿ. ಶಕ್ತಿ ಸ್ವರೂಪಿಣಿಯಾದ ಆ ಮಹಾಮಾತೆ ನಮಗೆ ಸರ್ವಮಾತೆ. ತಾಯಿಯನ್ನು ಪ್ರೀತಿಸುವ, ತಾಯಿ ಭಾಷೆಯನ್ನು ಆಡುವ, ತಾಯಿನಾಡನ್ನು ರಕ್ಷಿಸುವ ಇವೆಲ್ಲಾ ನಮಗೆ ಮಂಗಳಕರ.

● **ಸಿ. ಜಿ. ಮುತ್ತಪ್ಪ, ಕುಶಾಲನಗರ.**

ಕೃಷಿ ಉದ್ಯಮವಾಗಿರುವ ಅನಾನಸ್

ಅನಾನಸ್ ಎಲ್ಲರೂ ಇಷ್ಟಪಡುವ ರುಚಿಯಾದ ಹಣ್ಣು. ಅದರ ಶರಬತ್ತು ಎಲ್ಲ ವಯೋಮಾನದವರಿಗೂ ಅಪ್ಯಾಯಮಾನ.

ಇದು ಉಷ್ಣ ವಲಯದ ತಂಪಾದ ಹವೆಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹವಾಯಿ ದ್ವೀಪಗಳು ಅನಾನಸ್ ಉದ್ಯಮಕ್ಕೆ ಪ್ರಸಿದ್ಧಿಯಾಗಿದೆ. ಅಲ್ಲಿಯ ಜನರು ಬಗೆ ಬಗೆಯ ಪೇಯಗಳನ್ನು ತಯಾರಿಸಿ ದೇಶ ವಿದೇಶಗಳಿಗೆ ರಫ್ತು ಮಾಡುತ್ತಾರೆ. ಅಲ್ಲಿಯವರಿಗೆ ಇಂದು ಅನಾನಸ್ ವ್ಯವಸಾಯೋದ್ಯಮ ಒಂದು ವರಪ್ರಸಾದವಾಗಿದೆ. ಹೆಚ್ಚು ರಾಷ್ಟ್ರೀಯ ಆದಾಯ ನೀಡುವ ಆದ್ಯ ಬೆಳೆ. ಅಷ್ಟೇ ಅಲ್ಲದೆ ಅದರ ಸಿಪ್ಪೆಯಿಂದ ಚಟ್ನಿ ಮತ್ತು ಪಲ್ಯ ಮಾಡುತ್ತಾರೆ. ಮಲೆನಾಡಿನ ಪ್ರಮುಖ ಬೆಳೆ ಅನಾನಸ್ ಆಗಿದೆ.

ಅನಾನಸಿಗೆ ಅಪೂರ್ವವಾದ ಇತಿಹಾಸವಿದೆ. ದಕ್ಷಿಣ ಅಮೇರಿಕಾದ ಬ್ರೆಜಿಲ್ ಇವರ ತವರೂರು. ಕೊಲಂಬಸ್ ಅಮೇರಿಕವನ್ನು ಕಂಡು ಹಿಡಿಯುವುದಕ್ಕೂ ಮೊದಲೇ ಅಲ್ಲಿ ಅನಾನಸ್ ಜನಪ್ರಿಯವಾಗಿತ್ತು. ಇದನ್ನು ಸ್ಪೇಯಿನ್‌ನಲ್ಲಿ 'ಫೈನ್' ಎಂದು ಕರೆದರು. ಅದೇ ನಂತರ 'ಫೈನಾಪಲ್' ಆಯಿತು. ನಂತರ ಅದಕ್ಕೆ 'ಅನಾನಸ್' ಎಂಬ ಹೆಸರು ಬಂತು. ಗುರಾಣಿ ಭಾಷೆಯಲ್ಲಿ 'ಎ' ಎಂದರೆ ಹಣ್ಣು 'ನಾನಾ ಎಂದರೆ ಉತ್ಕೃಷ್ಟವಾದ ಎಂದು. ಆದ್ದರಿಂದ ಉತ್ಕೃಷ್ಟವಾದ ಹಣ್ಣು ಎಂದರ್ಥ.

ಅನಾನಸ್ ಅತಿ ಉಪಯುಕ್ತವಾದ ಹಣ್ಣು. ಇದರಿಂದ ಗೊಜ್ಜು, ಕೇಸರಿಬಾತ್ ಜ್ಯೂಸ್, ಫ್ರೂಟ್‌ಸಾಲಾಡ್, ಸಾಸಿವೆ, ಅದರ ರಸದಿಂದ ಸಕ್ಕರೆ, ಸಿರಪ್‌ಗಳನ್ನು, ಸಾವಯವ ಆಮ್ಲಗಳನ್ನು ಸಿಟ್ರಿಕ್, ಅಸ್ಕಾರ್ಬಿಕ್, ಮ್ಯಾಲಿಕ್ ಶ್ರೇಷ್ಠ ದರ್ಜೆ ಮದ್ಯಗಳನ್ನು ಹಾಗೂ ಎಲೆಯ ನಾರಿನಿಂದ ಉತ್ತಮ ಮಟ್ಟದ ರೇಷ್ಮೆಯಂತಹ ನೂಲುಗಳನ್ನು ತೆಗೆದು ಬಟ್ಟೆಯನ್ನು ತಯಾರಿಸುತ್ತಾರೆ. ರಸತೆಗೆದ ಹಣ್ಣಿನ ಸಿಪ್ಪೆ ಮತ್ತು ತಿರುಳಿನಿಂದ ಜಾನುವಾರುಗಳ ಮೇವನ್ನು ತಯಾರಿಸುತ್ತಾರೆ. ಮೈಸೂರಿನ ಕೇಂದ್ರ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ ಅನಾನಸಿನಿಂದ ಬ್ರಾಂದಿ ತಯಾರಿಸುವ ಕ್ರಮವನ್ನು ಕಂಡು ಹಿಡಿದಿದೆ.

ಬಲಿತ ಕಾಂಡಗಳಲ್ಲಿ ಶೇ. 10-15 ಶರ್ಕರ ಪಿಷ್ಟಗಳಿವೆ. ಈ ಪಿಷ್ಟವನ್ನು ಸಕ್ಕರೆಯಾಗಿಸಿ ಸಿಹಿ ತಿಂಡಿಗಳಲ್ಲಿ ಬಳಸುತ್ತಾರೆ.

ಅನಾನಸ್ ಹಣ್ಣಿನ ರಸಕ್ಕೆ ರೋಗ ನಿರೋಧಕ ಶಕ್ತಿಯಿದೆ. ಜ್ವರ ನಿವಾರಕ, ಮೂತ್ರವರ್ಧಕ ಅಲ್ಲದೆ ಕರುಳಿನಲ್ಲಿರುವ ಅಪಾಯಕಾರಿ ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಶಕ್ತಿ ಹೊಂದಿದೆ. ಎಲೆಯ ರಸಕ್ಕೆ ಜೇನು ತುಪ್ಪ ಸೇರಿಸಿ ಸವಿದರೆ ಕಾಮಾಲೆ ರೋಗಕ್ಕೆ ದಿವ್ಯೌಷಧಿ.

(4ನೇ ಪುಟದಿಂದ)

ಸಂಗಾತಿ : ಇಂದಿನ ಯುವಕರಿಗೆ ನಿಮ್ಮ ದೇನಾದರು ಮಾರ್ಗದರ್ಶನವಿದೆಯೇ ?

ಉ : ಇಂದಿನ ಯುವಕರು ಬಹಳ ಮುಂದು ವರಿಯುತ್ತಿದ್ದಾರೆ. ಅವರಿಗೆ ಪ್ರೋತ್ಸಾಹದ ಅವಶ್ಯಕತೆಯಿದೆ. ಆದರೆ ನಮ್ಮ ಜನಾಂಗ ದಲ್ಲಿ ಮುಂದುವರೆಯುವವರನ್ನು ಕಂಡರೆ ಕಾಲೆಳೆಯುವವರೇ ಜಾಸ್ತಿ. ಆದರೂ ಅದನ್ನು ಸಹಿಸಿ ಇಂದು ಎಲ್ಲಾ ಕ್ಷೇತ್ರಗಳ ಲ್ಲೂ ನಮ್ಮ ಯುವ ಜನತೆ ಮುನ್ನಡೆಯು ತ್ತಿದೆ. ಅದನ್ನು ಕೊಡಗು ಸಂಗಾತಿಯೇ ಪತ್ತೆಹಚ್ಚುತ್ತಿದೆಯಲ್ಲ ?

ಸಂಗಾತಿ : ಈ ಸಂದರ್ಭದಲ್ಲಿ ಗೌಡ ಜನಾಂಗದ ಅಭಿವೃದ್ಧಿಗೆ ದುಡಿದವರನ್ನು ಸ್ಮರಿಸುವಿರಾ ?

ಉ : ಕುಂಬುಗೋಡುನ ಕುಶಾಲಪ್ಪ, ತೆಕ್ಕಡೆ ಆನಂದಯ್ಯ, ಸುಬ್ಬಯ್ಯ, ಬಡ್ಡನ ಮುತ್ತಣ್ಣ, ಚೆರಿಯಮನೆ ಪೊನ್ನಪ್ಪ, ಕೃಷ್ಣಪ್ಪ, ಕೊಡೆಕಲ್ ಮನೆಯವರು ಇತ್ತೀಚೆಗೆ ಪೇರಿಯನ ಪೂವಯ್ಯ, ದಂಬೆ ಕೋಡಿ ಸುಬ್ರಾಯ, ಕುದುಪಜೆ ಕೃಷ್ಣ ನವರು ಅಷ್ಟೇ ಅಲ್ಲದೆ ಎಲೆಮರೆಯಕಾಯಿ ಗಳಂತೆ ಹಲವಾರು ಜನ ಗೌಡ ಜನಾಂಗದ ಅಭಿವೃದ್ಧಿಗೆ ದುಡಿದಿದ್ದಾರೆ, ಇನ್ನೂ ದುಡಿಯುತ್ತಿದ್ದಾರೆ.

ಸುಬ್ಬಯ್ಯನವರ ಐದು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕ ಳನ್ನು ಪಡೆದಿದ್ದಾರೆ. ಹಿರಿಯಮಗ ಇಂಜಿನಿಯರಿಂಗ್ ಮಾಡಿ ಡೆಪ್ಯುಟಿ ಡೈರೆ ಕ್ಟರ್ ಆಫ್ ಟೌನ್ ಪ್ಲಾನಿಂಗ್ ಆಗಿ ಕೆಲಸ ನಿರ್ವಹಿಸಿದರೆ, ಇನ್ನೊಬ್ಬ ಮಗ ಮೈಸೂರಿನ ವಿಜಯ ಬ್ಯಾಂಕಿನ ಅಧಿಕಾರಿ. ಮೂರನೆ ಮಗ ದೊಡ್ಡ ಕಲಾಕಾರರಾಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿ ದ್ದಾರೆ. ಇನ್ನಿಬ್ಬರು ಪುನೆ, ತೋಟ ನಿರ್ವ ಹಣೆ ಮಾಡಿಕೊಂಡು ಸುಖವಾಗಿದ್ದಾರೆ. ಇಬ್ಬರು ಪುತ್ರಿಯರು ವಿವಾಹವಾಗಿದ್ದಾರೆ. ಇವರ ಧರ್ಮಪತ್ನಿ ಪೈಕೇರ ದಿ|| ಚಂಗಪ್ಪ ನವರ ಪುತ್ರಿ ಕಾವೇರಮ್ಮನವರನ್ನು ಕಳೆ ದುಕೊಂಡ ದುಃಖ ಅವರಲ್ಲಿತ್ತು.

ಅವರು ಮಾತನಾಡುವಾಗ, ಗೌಡಜನಾಂಗ ಇನ್ನೂ ಅಭಿವೃದ್ಧಿಯಾಗಬೇಕೆಂಬ ಅವರ ಮನದಾಳದ ಆಸೆಯನ್ನು ಸಂಗಾತಿ ಗುರು ತಿಸಿತು. ದೇಶಕ್ಕಾಗಿ, ಜನರಿಗಾಗಿ ಇಷ್ಟೆಲ್ಲಾ ದುಡಿದ ಇವರು ತಮಗೆಂದು ಏನೂ ಮಾಡಿಲ್ಲ. ಇವರಲ್ಲಿ ಹೃದಯ ಶ್ರೀಮಂತಿಕೆ ಇತ್ತೇ ಹೊರತು, ಐಶ್ವರ್ಯ ಪ್ರತಿಷ್ಠೆ ಇರಲಿಲ್ಲ. ಸಂಗಾತಿಯಂತಹ ಪತ್ರಿಕೆಯನ್ನು ಬೆಳೆಸುವು ದು ನಮ್ಮ ಕರ್ತವ್ಯವೆಂದು ಭಾವಿಸಿದವರು ಅವರು ಆದುದರಿಂದಲೇ 'ಸಂಗಾತಿ' ಬಿಡು ಗಡೆ ಸಮಾರಂಭಕ್ಕೆ ಮಡಿಕೇರಿಯಿಂದ ಮೈಸೂರಿಗೆ ಆಗಮಿಸಿದ್ದರು. ಇವರ ಒಳ್ಳೆ ಯ ಕೆಲಸಗಳಿಗೆ ನಿದರ್ಶನವಾಗಿ ಇಂದಿಗೂ ಅಭಿಮಾನಿಗಳು ಅಭಿನಂದಿಸುವುದನ್ನು ಸಂಗಾತಿ ಕಣ್ಣಾರೆ ಕಂಡಿತು.

ನಮ್ಮನ್ನು ಸ್ವಾತಂತ್ರ್ಯ ಪೂರ್ವಕ್ಕೆ ಕರೆದೊಯ್ದು ಮತ್ತೆ ಇಂದಿಗೆ ಕರೆತಂದು ಕಾಲದರ್ಶನ ಮಾಡಿಕೊಟ್ಟ ಈ ಮಹಾನ್ ವ್ಯಕ್ತಿಗೆ ಸಂಗಾತಿ ನಮಿಸಿ ಹೊರಟಾಗ, ಕೈ ಜೋಡಿಸಿ ವಂದಿಸಿ ಬೀಳ್ಕೊಟ್ಟರು.

ಬಹುಮುಖ ಯುವ ಪ್ರತಿಭೆಯ ಕು|| ಗೀತಾ ಮೋಂಟಡ್ಕ

(ಕಳೆದ ಸಂಚಿಕೆಯಿಂದ)

ಗೀತಾ ನೀಡಿದ ಸಾಂಸ್ಕೃತಿಕ ಹಾಗೂ ಏಕ ವ್ಯಕ್ತಿ ಪ್ರದರ್ಶನಗಳು ಹಲವಾರು ತಾಲ್ಲೂಕು, ಜಿಲ್ಲಾ, ವಿಭಾಗೀಯ ಹಾಗೂ ಯುವಜನ ಮೇಳದಲ್ಲಿ ಮೆರೆದಿವೆ. 200ಕ್ಕೂ ಮಿಕ್ಕಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾಳೆ ಹಾಗೂ ಉತ್ತಮ ಹಾಡುಗಾರ್ತಿ ಸಹ ಹೌದು. ದೆಹಲಿ ಮತ್ತು ಅಮೃತಸರದಲ್ಲಿ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಪಾಲ್ಗೊಂಡಿದ್ದಾಳೆ. ಪ್ರಶಸ್ತಿ, ಪುರಸ್ಕಾರಗಳು ಸಾಕಷ್ಟು ಬಂದಿವೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ 600ಕ್ಕೂ ಹೆಚ್ಚು ಪ್ರಶಸ್ತಿಗಳು ಲಭಿಸಿವೆ. ಅಮೃತಸರದ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಕರ್ನಾಟಕದ ಉತ್ತಮ ಕಲಾವಿದೆ ಪ್ರಶಸ್ತಿ, ಸುಳ್ಯ ತಾಲ್ಲೂಕಿನ ಉತ್ತಮ ಕಲಾವಿದೆ ಪ್ರಶಸ್ತಿ, ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ನಾಟಕರಂಗದ ಕಲಾವಿದೆ ಪ್ರಶಸ್ತಿ, 1996ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗೌಡ ಸಮ್ಮೇಳನದಲ್ಲಿ ಶಾಲು ಹೊದಿಸಿ ಸನ್ಮಾನ, 1997ರಲ್ಲಿ ರಂಗಾಯಣ ತಂಡ ಅಮೇರಿಕಾ ಪ್ರವಾಸ ಕೈಗೊಂಡಾಗ ನ್ಯೂಯಾರ್ಕ್ ನಗರದಲ್ಲಿ ಯಶೂರಿ ಪಿಡಿಸನ್ ಹಿಪ್ಪೋಲಿಟಸ್ ನಾಟಕ ಪ್ರದರ್ಶನದ ಅನುಭವ, 1995ರಲ್ಲಿ ಈ ತಂಡ ಜರ್ಮನಿ, ಆಸ್ಟ್ರೀಯಾ ದೇಶಗಳ ಪ್ರವಾಸ ಕೈಗೊಂಡಿದ್ದಾಗ ಅಲ್ಲಿನ ಮ್ಯೂಸಿಕ್, ಬರ್ಲಿನ್, ಸ್ಟೂಟಗಾರ್ಟ್, ಸಾಲ್ಸೆಬರ್ಗ್‌ಗಳಲ್ಲಿ ಶೇಕ್ಸ್‌ಪಿಯರ್‌ನ ಸಮ್ಮರ್‌ನೈಟ್ ಡ್ರೀಮ್ಸ್ ನಾಟಕ ಪ್ರದರ್ಶನದ ಅನುಭವ, ಅಲ್ಲದೆ ತಾನೇ ಸ್ವತಃ "ಗಾಣ" ಮತ್ತು "ಶಾಂತಿ ಗ್ರಾಮ" ನಾಟಕಗಳ ನಿರ್ದೇಶನವನ್ನು ಸಹ ಮಾಡಿದ್ದಾಳೆ. "ಗಾಣ"ವು ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದಿದೆ. ಇಷ್ಟೇ ಅಲ್ಲದೆ ದೇಶ, ವಿದೇಶದ, ನಿರ್ದೇಶನ ತಂತ್ರಜ್ಞರೊಂದಿಗೆ ಅಭಿನಯ ಮತ್ತು ತಾಂತ್ರಿಕತೆಯಲ್ಲಿ ಶಿಕ್ಷಣ ಹಾಗೂ ಅವರೊಂದಿಗೆ ಕೆಲಸ ಮಾಡಿದ ಅನುಭವವಿದೆ. ಜಾನ್ ಮಾರ್ಟೀನ್. ಬೆನ್‌ವಿಟ್ಸ್, ತಾಪಸೇನ್, ನಿರಂಜನ, ಗೋಸ್ವಾಮಿ, ಇಲಿಯಾನಾ ಸಾವಿತ್ರಿ, ರುಸ್ತೂರಿ, ಭರೋಚ, ಫಿಲಿಪ್, ವಸೀಲಿ, ಬಿ.ವಿ. ಕಾರಂತ ಇತ್ಯಾದಿ ಹಲವಾರು ಮಹಾ ನಿರ್ದೇಶಕರ ಜೊತೆ ಸಹಬಾಗಿಯಾಗಿ ದುಡಿದ ಅನುಭವ ಮತ್ತು ಸಾಕಷ್ಟು ಪರಿಣತಿ ಗೀತಾ ಅವಳಿಗಿದೆ.



ಕು|| ಗೀತಾ ಮೋಂಟಡ್ಕ

ನಾಟಕದ ಹಿನ್ನೆಲೆ, ಪರಿಣಾಮಕ್ಕಷ್ಟೇ ಮಿಮಿಕ್ರಿ ಬಳಕೆಯಾಗಬೇಕಿಲ್ಲ. ಶಾಲೆಗಳಲ್ಲಿ, ಮಕ್ಕಳ ಶಿಕ್ಷಣದಲ್ಲಿ ಈ ಕಲೆಗೆ ಸಾಕಷ್ಟು ಅವಕಾಶವಿದೆ. ಕಥೆ ಹೇಳುವ ರೀತಿಯನ್ನೇ ಈ ಕಲೆ ಬದಲಾಯಿಸಿ, ಮಗುವಿಗೆ ಹೊಸಲೋಕವನ್ನೇ ಸೃಷ್ಟಿಸಿಕೊಡಬಹುದು. ಗೀತಾ ಇದ್ದಕ್ಕಿದ್ದಂತೆ ತಮ್ಮ ಮನಸ್ಸನ್ನು ಮುದುಡಿಕೊಳ್ಳುತ್ತಾಳೆ. ತಾನು ಹೆಣ್ಣಾಗಿ ಈ ಕಲೆಯ ಹುಚ್ಚು ಹಚ್ಚಿಸಿಕೊಂಡಿದ್ದಕ್ಕೆ ಗಂಡು ಬೀರಿಯ ಪಟ್ಟ ಪಡೆದದ್ದು ಲಾಭವಾಯಿತೋ ಏನೋ ಎಂದು ಹೇಳಿಕೊಳ್ಳುತ್ತಾಳೆ. ಗೀತಾಳ ಪ್ರತಿಭೆ ಬರಿ ಮಿಮಿಕ್ರಿ ಮಾಡುವುದರಲ್ಲೇ ಮುಗಿಯಬಾರದು. "ಮಿಮಿಕ್ರಿಗೊಂದು ಕಲೆಯ ಸ್ಥಾನವನ್ನು ತಂದು ಕೊಡಬೇಕು ಮತ್ತು ಅದೇ ಪ್ರತಿಭೆಗೆ ಸಾಕಷ್ಟು ಅವಕಾಶ, ಪ್ರೋತ್ಸಾಹ ಕೊಡಬೇಕು. ಆಗಲೇ ಜೀವನ ಸಾರ್ಥಕ" ಅನ್ನುತ್ತಾಳೆ ಗೀತಾ.

ರಂಗಾಯಣದಲ್ಲಿ ಅರಳಿದ ಹತ್ತಾರು ಬಗೆಯ ಸುಂದರ ಅಭಿವ್ಯಕ್ತಿಗಳಲ್ಲಿ ಗೀತಾ ಒಬ್ಬಳು. ಅಲ್ಲದೆ ಈಕೆ ನಾಟಕ, ಯಕ್ಷಗಾನ, ಏಕ ಪಾತ್ರ ಅಭಿನಯ, ಮೂಕಾಭಿನಯ, ಛದ್ಮ ವೇಷ, ಸಂಗೀತ, ನೃತ್ಯ, ಚಿತ್ರಕಲೆ ಮುಂತಾದ ಯಾವುದೇ ರಂಗದಲ್ಲಿ ಈಕೆಯ ಪ್ರತಿಭೆ ಅಸಾಮಾನ್ಯ. ಅವಳ ಸ್ವಾಭಿಮಾನ, ಛಲ, ತನ್ನ ಮನಸ್ಸಿಗೆ ತಾನು ನಿಷ್ಠಳಾಗಿ ಕು|| ಗೀತಾ ಮಿಮಿಕ್ರಿಯಷ್ಟೇ ಚೇತೋಹಾರಿಯಾಗಿದ್ದಾಳೆ. ಸ್ತ್ರಿ ಸಹಜ ಬಯಕೆ ಸಂಸಾರಿಯಾಗಿ ಜೀವನ ಸಂಗಾತಿಯನ್ನು ಪಡೆದು, ಅಲ್ಲಿ ತನ್ನ ಹಿಂದಿನ ನೋವನ್ನೆಲ್ಲಾ ಮರೆಯಬೇಕು ಅನ್ನುತ್ತಾಳೆ ಕು|| ಗೀತಾ. ಕೊಠಡಿ ತುಂಬಾ ಈಕೆಯ ಕಲಾತ್ಮಕ ಚಿತ್ರಕಲೆಯನ್ನು ಮೆಚ್ಚಿದೆ ಈ ನಮ್ಮ ಸಂಗಾತಿ ಬಳಗ.

ಇಂತಹ ವಿರಳ ಬಹುಮುಖ, ಯುವ ಮಹಿಳಾ ಪ್ರತಿಭೆಯನ್ನು ಕರ್ನಾಟಕ ಮತ್ತು ಭಾರತ ಸರ್ಕಾರ ಗುರುತಿಸುವಲ್ಲಿ ಸಫಲವಾಗಿ, ಪದ್ಮಶ್ರೀ ಯಂತಹ ಪ್ರಶಸ್ತಿಗಳು ಲಭಿಸಿದಾಗ ಈ ಏಕೈಕ ಮಹಿಳಾ ಮಿಮಿಕ್ರಿ ಗೂಡೆಗೆ (ಹುಡುಗಿ) ಸಂತಸ ಹಾಗೂ ಸಾಂತ್ವನವಾಗಬಲ್ಲುದೇನೋ. ಹಾಗೆ ಆದಾಗ ಮಾತ್ರ ನಮ್ಮ ಸಂಗಾತಿ ಬಳಗಕ್ಕೆ ತೃಪ್ತಿ.

● **ಪಟ್ಟಡ ಮುತ್ತಣ್ಣ ಪ್ರಭಾಕರ**

ಒಕ್ಕಲಿಗರು : ಪುರಾಣದಿಂದ ಪರಿಷತ್ ನಿಘಂಟಿನವರೆಗೆ

(ಕಳೆದ ಸಂಚಿಕೆಯಿಂದ)

ನಿಘಂಟು

ಕಿಟ್ಟೆಲ್ ನಿಘಂಟಿನಲ್ಲಿ ಗೌಡ ಶಬ್ದಕ್ಕೆ, 'ದಿ ಚೀಫ್ ಆಫೀಸರ್ ಆಫ್ ಎ ವಿಲೇಜ್' ಎಂದರ್ಥ. ಕನ್ನಡ ಸಾಹಿತ್ಯ ಪರಿಷತ್ ನಿಘಂಟು ಗ್ರಾಮದ ಮುಖ್ಯಸ್ಥ ಎನ್ನುತ್ತದೆ. ತುಳು-ಇಂಗ್ಲೀಷ್ ಶಬ್ದಕೋಶದಲ್ಲಿ ಹಳ್ಳಿಯ ಮುಖ್ಯಸ್ಥ ಎಂದಿದೆ. ಮಹಾರಾಷ್ಟ್ರ ಶಬ್ದಕೋಶದ ಮೂರನೆ ಸಂಪುಟದಲ್ಲಿ ಪ್ರಕಾರ ಪಟೀಲ, ಗ್ರಾಮದ ಮುಖ್ಯಾಧಿಕಾರಿ ಎಂದಾಗುತ್ತದೆ. ಪ್ರಾಕೃತ ಶಬ್ದ ಮಹಾರ್ಣವದ ಪ್ರಥಮ ಸಂಪುಟ ಗಾಮಉಡ, ಗಾಮಊಡ, ಗಾಮಂಕೀ, ಮುಖ್ಯಾಧಿಕಾರಿ ಎಂದೆಲ್ಲ ಹೇಳುತ್ತದೆ.

ಡಾ|| ಚಿದಾನಂದ ಮೂರ್ತಿಯವರು, 'ಸಂಸ್ಕೃತದ ಗ್ರಾಮಕೂಟ ಪದ ಊರ ಮುಖ್ಯಸ್ಥ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅದೇ ಅರ್ಥದಲ್ಲಿ ಗಾಮಊಡ-ಗಾಮಉಡ ಪದ ಪಾಕೃತದಲ್ಲಿ ಪ್ರಯೋಗವಾಗಿದೆ ಗ್ರಾಮ ಉಡವೇ ಕನ್ನಡದಲ್ಲಿ ಗಾಮುಣ್ಣನಾಗಿ 8-9ನೇ ಶತಮಾನದ ಶಾಸನಗಳಲ್ಲಿ ಬಳಕೆಯಾಗಿದೆ. 12ನೇ ಶತಮಾನದಲ್ಲಿ ಈ ಪದ ಗಾವುಂಡ ರೂಪತಾಳಿ 17ನೇ ಶತಮಾನದ ಶಾಸನಗಳಲ್ಲಿ ಗೌಡ ಎಂದಾಗಿದೆ ಎಂದಭಿಪ್ರಾಯ ಪಡುತ್ತಾರೆ. ಅವರೇ ಗ್ರಾಮಸಭೆ ಬಗ್ಗೆ ಬರೆಯುತ್ತಾರೆ. 'ಒಂದೊಂದು ಊರಲ್ಲಿಯೂ ಒಂದೊಂದು ಗ್ರಾಮ ಸಭೆ ಇರುತ್ತಿತ್ತು. ಈ ಸಭೆಯ ಮುಖ್ಯಸ್ಥ ಅಥವಾ ಪ್ರಭು ಗಾಮುಂಡ ಗ್ರಾಮಸಭೆಯ ಇತರ ಸದಸ್ಯರು ಊರಿನ ಹಿರಿಯರು.. ರಾಜ್ಯದಲ್ಲಿ ಅವರಿಗೆ ಪರಮಾಧಿಕಾರ.. ಗ್ರಾಮಸಭೆಗಳು ಜನತೆಯದಾದ್ದರಿಂದ ಮೂಲತಃ ಸಮಾಜವಾದಿ ಸಂಸ್ಥೆಗಳಾಗಿದ್ದು ಶುದ್ಧ ಪ್ರಜಾಪ್ರಭುತ್ವ ತತ್ವಗಳನ್ನು ಅಳವಡಿಸಿಕೊಂಡಿದ್ದವು ಎನ್ನುತ್ತಾರೆ.

ಡಾ|| ಎ. ಎನ್. ನರಸಿಂಹಯ್ಯನವರು ಗ್ರಾಮವೃದ್ಧ ಪದದಿಂದ ಗಾವುಂಡ ಸಿದ್ಧಿಸಿದ್ದು ಕಾಲಾಂತರದಲ್ಲಿ ಗೌಡ ಎಂದಾಗಿದೆ ಎಂದರೆ, ಮಾಕೋನಹಳ್ಳಿ ದೊಡ್ಡಪ್ಪ ಗೌಡರು "ಗೌಡ ಎಂದರೆ ಯಜಮಾನ ಎಂದರ್ಥ, ಅದು ಆಡಳಿತಾಂಗದ ಒಂದು ಹುದ್ದೆಯನ್ನು ಸೂಚಿಸುತ್ತದೆ" ಎನ್ನುತ್ತಾರೆ.

ಆಲೆಕ್ಸರ್ ಪ್ರಕಾರ ಗಾಮುಣ್ಣರನ್ನು ಜನರ ಪ್ರತಿನಿಧಿಗಳೆಂದೇ ಮಾನ್ಯ ಮಾಡಲಾಗುತ್ತಿತ್ತು. ಗಾಮುಂಡರು ನ್ಯಾಯಾಧಿಕಾರಿಗಳೂ ಆಗಿದ್ದರು. ಮುಖ್ಯ ಕೆಲಸಗಳಲ್ಲಿ ಗಾಮುಣ್ಣರದೇ ನಿರ್ಣಾಯಕ ಮಾತು. ಇದಕ್ಕಾಗಿ ಅವರಿಗೆ ತೆರಿಗೆ ರಹಿತ ಜಮೀನನ್ನು ಉಂಬಳಿಯಾಗಿ ಕೊಡುತಿದ್ದರು. ಒಬ್ಬ ಗಾಮುಣ್ಣ ವೃತ್ತಿಯಲ್ಲಿದ್ದಾಗ ಆತನ ಮನೆತನಕ್ಕೆ ಸೇರಿದ ಎಲ್ಲರೂ ಗಾಮುಣ್ಣ ಉಪನಾಮ ಧರಿಸಿಕೊಳ್ಳುತ್ತಿದ್ದರು.

ಡಾ|| ಎ. ವಿ. ವೆಂಕಟರತ್ನಂರವರು ವಿಜಯನಗರ ಸಾಮ್ರಾಜ್ಯದ ಬಗ್ಗೆ ಬರೆಯುತ್ತಾ ಗೌಡಿಕೆ ಕುರಿತು ಹೇಳುತ್ತಾರೆ, 'ಗೌಡಿಕೆ ಅಥವಾ ಗ್ರಾಮ ಮುಖಂಡತ್ವ ಹುದ್ದೆ ಆಶಾರ್ಹವಾಗಿತ್ತು. ವಿಜಯನಗರ ಮುಂಚಿನ ಕರ್ನಾಟಕದಲ್ಲಿ ಗಾವುಂಡ ಅಥವಾ ಗ್ರಾಮದ ಮುಖಂಡ ಗ್ರಾಮ ಸಭೆಯ ಮುಖ್ಯಕಾರ್ಯನಿರ್ವಾಹಕರ ಹಾಗೂ ಗ್ರಾಮಾಡಳಿತದ ಮುಖ್ಯ ಅಧಿಕಾರಿಯಾಗಿದ್ದ. ಗ್ರಾಮಸಭೆಯೊಡನೆ ಗ್ರಾಮದ ಅಭ್ಯುದಯದ ಜವಾಬ್ದಾರಿ ಹೊಂದಿದ್ದ. ಗೌಡಿಕೆ ಹುದ್ದೆಯನ್ನು ರಾಜ ಅಥವಾ ಅಧಿಕಾರಿಗಳು ಅಥವಾ ಗ್ರಾಮಸ್ಥರು ಅಥವಾ ನಾಡಿನವರು ಗ್ರಾಮ ಅಥವಾ ಗ್ರಾಮಗಳ ಸೇವೆಯಿಂದ ಹೆಸರುವಾಸಿಯಾದವನಿಗೆ ಕೊಡುತ್ತಿದ್ದರು. ಆತ ಜನರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ. ಆತನ ಸಂಭಾವನೆ ಗೌಡುಕೊಡುಗೆ ಅಥವಾ ತೆರಿಗೆ ರಿಯಾಯಿತಿ ಪಡೆದ ಭೂಮಿ. ಆತ ಗ್ರಾಮ ದಂಡಾಧಿಕಾರಿಯಾಗಿ ಸಣ್ಣಪುಟ್ಟ ಅಪರಾಧಗಳ ವಿಚಾರಣೆ ನಡೆಸುತ್ತಿದ್ದ. ಗ್ರಾಮ ಮುಖಂಡನನ್ನು ರೆಡ್ಡಿ ಅಥವಾ ಗೌಡನೆಂದು ಗ್ರಾಮಕೂಟ ಎಂದೂ ತಮಿಳು ಪ್ರಾಂತ್ಯದಲ್ಲಿ ಕರೆಯುತ್ತಿದ್ದರು. ಗೌಡ ಪದ ಈ ಪದದಿಂದ ಬಂದಿರಬಹುದು.

ಕನ್ನಡ ಸಂಸ್ಕೃತಿ

'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'ಯಲ್ಲಿ ಗ್ರಾಮಾಡಳಿತ ವಿವರಿಸುವಾಗ ಡಾ|| ಎಚ್. ತಿಪ್ಪೇರುದ್ರಸ್ವಾಮಿಯವರು ಬರೆಯುತ್ತಾರೆ, 'ಪ್ರತಿ ಹಳ್ಳಿಯೂ ಒಬ್ಬೊಬ್ಬ ಗ್ರಾಮ ಮುಖಂಡನ ಆಡಳಿತಕ್ಕೊಳಪಟ್ಟಿತ್ತು. ಇವನನ್ನು ಗ್ರಾಮಕೂಟ, ಗಾವುಂಡ ಹೆಸರುಗಳಿಂದ ಕರೆಯುಲಾಗುಲಾಗುತ್ತಿತ್ತು. ವಂಶಪಾರಂಪರ್ಯವಾಗಿ ಬರುತ್ತಿದ್ದ ಅಧಿಕಾರ ಇದು. ಈತ ಒಂದು ಕಡೆ ಸರ್ಕಾರಿ ಅಧಿಕಾರಿಯಾಗಿದ್ದರೆ, ಇನ್ನೊಂದು ಕಡೆ ಜನರ ಪ್ರತಿನಿಧಿ. ಹಳ್ಳಿಯ ರಕ್ಷಣೆ ಹೊಣೆ ಈತನದಾಗಿರುತ್ತಿತ್ತು. ಒಂದೊಂದು ಹಳ್ಳಿಯೂ ತನ್ನನ್ನು ರಕ್ಷಿಸಿಕೊಳ್ಳುವ ಏರ್ಪಾಟನ್ನು ಈತನ ನೇತೃತ್ವದಲ್ಲಿ ಮಾಡಿಕೊಳ್ಳುತ್ತಿತು. ಗೃಹರಕ್ಷಕ ದಳಗಳಿರುತ್ತಿದ್ದವು. ಹಳ್ಳಿಗಳ ಉತ್ಪತ್ತಿ ರಕ್ಷಣೆ, ನ್ಯಾಯತೀರ್ಮಾನ, ಶಾಂತಿ ಸುವ್ಯವಸ್ಥೆ ಏರ್ಪಾಟು ಇವೆಲ್ಲಕ್ಕೂ ಗಾವುಂಡನೆ ಮುಖ್ಯ ಅಧಿಕಾರಿ.

(ಮುಂದಿನ ಸಂಚಿಕೆ ನೋಡಿ)

ಆಧುನಿಕ ಜಗತ್ತಿಗೆ ಪರಿಸರದ ಮಹತ್ವ

ಜೂನ್ 5 ರಂದು ವಿಶ್ವಪರಿಸರ ದಿನ

ಮುಂಜಾನೆಯ ಮೂಡಣದಿ ರವಿತೇಜ ಮೂಡಲು, ಕುಹೂ...ಕುಹೂ ಎಂಬ ಕೋಗಿಲೆಯ ಸ್ವರ ಸಂಗೀತ, ಚಿಲಿಪಿಲಿ ಶಬ್ದದ ಹಕ್ಕಿಗಳ ಹಿಮ್ಮೇಳ, ಮುಂಜಾನೆಯ ಮಂಜಿನ ಉಡುಗೆ ತೊಟ್ಟ ಶ್ವೇತಾಂಬರಿ ಭೂರಮೆಯ ಮೈಮೇಲೆ ಅಲ್ಲಲ್ಲಿ ಇಣುಕುವ ಉಬ್ಬು ತಗ್ಗುಗಳು, ಭಾಸ್ಕರನು ಮೇಲೇರಲು ಶ್ವೇತಾಂಬರವ ಕಳಚಿ ಹಸಿರುಡುಗೆ ತೊಟ್ಟು ಅಲ್ಲಲ್ಲಿ ಹೂವಿನ ನಗುಬೀರಲು, ಮುತ್ತುವವು ದುಂಬಿಗಳು ಝೇಂಕಾರದ ಗಾನ ಮಾಧುರ್ಯದೊಡನೆ, ಮಕರಂದವನ್ನು ಹೀರಲು, ಅಲ್ಲಿ ತಂಪಾದ ಗಾಳಿಬೀಸಿ ಬರುತ್ತಿರುತ್ತದೆ, ಆ ಪರಿಸರ ರಮ್ಯಮನೋಹರವಾಗಿರುತ್ತದೆ. ಕರ್ಣ ನಯನಾನಂದಕರವಾಗಿರುತ್ತದೆ. ಕವಿಗೆ ಸ್ಫೂರ್ತಿಯ ತಾಣವಾಗಿರುತ್ತದೆ. ಪ್ರಕೃತಿಯ ಸೆಲೆ, ನಿಸರ್ಗದ ಸೆಲೆ ಅಲ್ಲಿ ಅಡಗಿರುತ್ತದೆ. ಆದರೆ ಇಂದಿನ ದಿನಗಳಲ್ಲಿ ಇದು ಕೇವಲ ಕಲ್ಪನೆಯಾಗತೊಡಗಿದೆ. ಅರಣ್ಯ ಪ್ರದೇಶಗಳೆಲ್ಲ ನಗರ ಪ್ರದೇಶಗಳಾಗತೊಡಗಿವೆ. ಬೆಳಗಾಗುತ್ತಿದ್ದಂತೆ, ವಾಹನಗಳ ಕರ್ಕಶ ಧ್ವನಿಗಳು, ಕಾರ್ಖಾನೆಗಳಿಂದ ಹೊರಹೊಮ್ಮುವ ಶಬ್ದ, ಹೊಗೆ ಧೂಳು ಮಿಶ್ರಿತ ಗಾಳಿ, ಅಂತರ್ಜಲ ಬತ್ತಿಹೋಗಿ ನೀರಿಗಾಗಿ ಪರದಾಟ, ಎಲ್ಲಾ ಉಪಯೋಗಗಳಿಗೂ ಒಂದೇ ನೀರು. ಸದಾ ಏನೋ ಗುಂಗು, ವ್ಯವಹಾರದ ಬಿಸಿ, ಬಾಹ್ಯ ಒತ್ತಡ, ಅಬ್ಬಬ್ಬಾ ! ನಗರ ಬದುಕು ನರಕ ಸದೃಶ್ಯ.

ಇಂದು ಮಾನವ ವೈಜ್ಞಾನಿಕತೆಯಿಂದ ಪ್ರಗತಿಯತ್ತ ಸಾಗುತ್ತಿದ್ದಾನೆ. ಆದರೆ ಪ್ರಗತಿಯ ಮುಂದೆ ಇರುವ ವಿನಾಶದಂಚಿನ ಕದವನ್ನು ತನಗರಿವಿಲ್ಲದೆ ತಟ್ಟುತ್ತಿದ್ದಾನೆ. ಆ ಕದ ತೆರೆದುಕೊಳ್ಳಬೇಕಾದುದು ಹೆಚ್ಚು ಅನಿವಾರ್ಯವಾಗಿದೆ. ರಾತೋ ರಾತ್ರಿ, ಜೀವಗಾಳಿ ನೀಡಬೇಕಾಗಿರುವ ಸಸ್ಯಸಂಕುಲ ನಾಶವಾಗಿ ಗಾಳಿಯ ಸಮತೋಲನದಲ್ಲಿ ವ್ಯತ್ಯಯವುಂಟಾಗಿ ಇಂಗಾಲಾಮ್ಲ, ಗಂಧಕದ ಡೈಆಕ್ಸೈಡ್, ಹೈಡ್ರೋಕಾರ್ಬನ್ ಮಿಶ್ರಿತ ಗಾಳಿಯ ಸೇವನೆ ವಿಶ್ವದ ಜನತೆಯನ್ನು ಬಾಧಿಸತೊಡಗಿದೆ. ಭೂಮಿಯ ಉಷ್ಣತೆ ಹೆಚ್ಚಾಗುತ್ತಿದ್ದು, ಇದು ಧ್ರುವ ಪ್ರದೇಶಗಳ ಮೇಲೆ ತನ್ನದೇ ಆದ ಒತ್ತಡ ಬೀರಿ ಪ್ರಳಯ ಸೃಷ್ಟಿಮಾಡಬಹುದು ಎಂಬ ಸಂಗತಿಯನ್ನು ತಳ್ಳಿಹಾಕುವಂತಿಲ್ಲ. ಬೆರ್ರಿಲಿಯಂ, ಸೆಲಿನಿಯಂ, ಕ್ರೋಮಿಯಂ, ಕ್ಲೋರಿನ್ ಹಾಗೂ ತೈಲಗಳ ತ್ಯಾಜ್ಯವಸ್ತುಗಳು ಪರಿಸರದ ಮೇಲೆ ತಮ್ಮ ರಾಕ್ಷಸೀಬಾಹುಗಳನ್ನು ಚಾಚುತ್ತಿವೆ. ಇದರಿಂದ ಭೂಮಿಯ ರಕ್ಷಣಾಪದರವಾದ ಓ ಜೋನ್ ನಿಸ್ಸಹಾಯಕವಾಗಿ ಭೂಮಿಯ ಕಡೆ ನೋಡುತ್ತಿದೆ. ಸೂರ್ಯನ ವಿಕಿರಣಗಳು ಭೂಮಿಯನ್ನು ನೇರವಾಗಿ ಕೆಲವು ಕಡೆ ಈಗಾಗಲೇ ತಲುಪುತ್ತಿವೆ.

ಜನಸಂಖ್ಯೆಯ ಹೆಚ್ಚಳದಿಂದಾಗಿ ಒಂದು ಸಮಸ್ಯೆಯನ್ನು ನೀಗಿಸುವ ಹೊತ್ತಿಗೆ ಮತ್ತೊಂದು ಸಮಸ್ಯೆ ತಲೆಯೆತ್ತುತ್ತಿದೆ. ವಿದ್ಯುತ್ ಉತ್ಪಾದನೆಗೆಂದು ಅಣುಸ್ಥಾವರ ನಿರ್ಮಾಣಕ್ಕೆ ಹೊರಟು ವಿಕಿರಣಗಳನ್ನು ಸ್ವಾಗತಿಸುತ್ತಿದ್ದೇವೆ. ಕರಾವಳಿ ಪ್ರದೇಶಗಳ ಅಮೂಲ್ಯ ಖನಿಜಗಳಿಗಾಗಿ ಮರಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸ ಹೋಗಿ ಭೂಸವೆತವನ್ನು ಸೃಷ್ಟಿಸುತ್ತಿದ್ದೇವೆ ನಿರುದ್ಯೋಗ ನಿವಾರಣೆಗೆ ಕಾರ್ಖಾನೆಗಳನ್ನು ಸ್ಥಾಪಿಸ ಹೊರಟು, ಅರಣ್ಯನಾಶ, ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದ ಮಾಲಿನ್ಯಗಳನ್ನು ಆಸ್ವಾದಿಸಬೇಕಾಗಿದೆ. ಹೆಚ್ಚಿದ ಜನಸಂಖ್ಯೆಗೆ ಆಹಾರ ಒದಗಿಸುವ ಸಲುವಾಗಿ ಮನುಜ, ಮಲೆನಾಡು ಹಾಗೂ ಕರಾವಳಿ ಪ್ರದೇಶಗಳ ಕಾಡುಗಳನ್ನು ಕಡಿದು ಗದ್ದೆಗಳನ್ನು ನಿರ್ಮಿಸಲಾಗಿ ಸಾಂಕ್ರಾಮಿಕ ರೋಗಳು ಹರಡಲು ಸಕಾರಣನಾಗಿದ್ದಾನೆ.

ಇಂದು ಭಾರತವು ವಿಶ್ವದ ಶೇ. 18ರಷ್ಟು ಮಾನವ ಸಂಪತ್ತನ್ನು, ಶೇ. 15 ರಷ್ಟು ಪಶು ಸಂಪತ್ತನ್ನು ಹೊಂದಿದೆ. ಆದರೆ ಇದು ಶೇ. 2 ರಷ್ಟು ಭೂಮಿ ಮತ್ತು ಶೇ. 1 ರಷ್ಟು ಮಾತ್ರ ಅರಣ್ಯವನ್ನು ಹೊಂದಿದೆ. 0.5 ರಷ್ಟು ಮಾತ್ರ ಹುಲ್ಲುಗಾವಲನ್ನು ಹೊಂದಿರುವುದರಿಂದ ಪರಿಸರದ ಅಸಮತೋಲನ ಅನಿವಾರ್ಯ ಅಂಶವಾಗಿದೆ. ಇದರ ಪರಿಣಾಮವಾಗಿಯೇ 172 ಪ್ರಾಣಿಸಂಕಲಗಳು ವಿನಾಶದ ಅಂಚನ್ನು ತಲುಪಿವೆ. 1982ರ ಸಮೀಕ್ಷೆ ಪ್ರಕಾರ 3,000–4,000,ಕ್ಕೂ ಹೆಚ್ಚು ಸಸ್ಯ ಸಂಕುಲಗಳು ನಾಶದಂಚಿನಲ್ಲಿದ್ದವು. ಕಳೆದ 45 ವರ್ಷಗಳಲ್ಲಿ ಅಂದರೆ 1995ರ ಹೊತ್ತಿಗೆ ವಾಹನಗಳ ಸಂಖ್ಯೆ ನೂರು ಪಟ್ಟು ಹೆಚ್ಚಾಗಿದ್ದು, 30 ದಶಲಕ್ಷವನ್ನು ಮುಟ್ಟಿತ್ತು. ಭಾರತ ಸರಕಾರವು ಜಾರಿಗೆ ತಂದಿರುವ ವನ್ಯಜೀವಿಕಾಯ್ದೆ1972, ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ-1974, ಅರಣ್ಯ ಸಂರಕ್ಷಣಾಕಾಯಿದೆ 1980, ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ-1981, ಪರಿಸರ ಸಂರಕ್ಷಣಾ ಕಾಯ್ದೆ-1986 ಮೊದಲಾದ ಕಾಯಿದೆಗಳು ಪುಸ್ತಕದ ಕಾನೂನುಗಳಾಗಿಯೇ ಉಳಿದುಕೊಂಡು, ರಾಜಕೀಯ ಒತ್ತಡದ ಪರಿಣಾಮವಾಗಿ ಹಲವಾರು ಬಾರಿ ಉಲ್ಲಂಘಿಸಲಾಗಿದೆ. ಕೆರೆ

ಗಳು, ಅರಣ್ಯಗಳು ಶ್ರೀಮಂತರ ರೆಸಾರ್ಟ್‌ಗಳ ತಾಣಗಳಾಗಿವೆ ಇದರಿಂದ ಭಾರತದ ನಗರಗಳು ಕೈಗಾರಿಕೆಗಳಿಂದ ಮಾಲಿನ ಕ್ಕೊಳಗಾದರೆ, ಹಳ್ಳಿಗಳು ಕೊಳಚೆ ಪ್ರದೇಶಗಳಾಗಿ ನಿರ್ಮಾಣ ಗೊಳ್ಳತೊಡಗಿದ್ದು, ಅಪಾಯದ ಕರೆಗಂಟೆ ಭಾರಿಸುತ್ತಿದೆ. ಕಳಪೆ ಕಾಮಗಾರಿಗಳನ್ನು ನಿಯಂತ್ರಿಸಲಾಗದೆ ರಸ್ತೆ ಬದಿಯ ಮರಗಳನ್ನೇ ಕಡಿಯಲು ಕರೆಕೊಡುತ್ತಿರುವುದು ಅಶೋಕ ಜನಿಸಿದ ಈ ನಾಡಿನ ವಿಪರ್ಯಾಸ.

ಚರ್ಮ, ಕೊಂಬು, ದಂತ ಸೇರಿದಂತೆ ಕಾಡುಪ್ರಾಣಿಗಳ ಅಂಗ, ಅವಯವಗಳಿಗೆ ಬೇಡಿಕೆ ಹೆಚ್ಚಿದ್ದರಿಂದ ಅವುಗಳ ಹತ್ಯೆ ಅವ್ಯಾಹತವಾಗಿ ನಡೆಯುತ್ತಿದೆ. ಇದರೊಡನೆ ಅಭಿವೃದ್ಧಿ ರಾಷ್ಟ್ರಗಳ ಪ್ರವಾಸಿಗಳು ಭಾರತಕ್ಕೆ ರಜೆ ಕಳೆಯಲು ಬರುವವರ ಸಂಖ್ಯೆ ಹೆಚ್ಚಾಗಿದ್ದು 2,000 ನೇ ಇಸವಿಯಲ್ಲಿ ಭಾರತವು 5 ದಶಲಕ್ಷ ಪ್ರವಾಸಿಗರನ್ನು ನಿರೀಕ್ಷಿಸಿದೆ. ಇದು ಸಹಜವಾಗಿಯೆ ಒತ್ತಡವನ್ನು ನಿರ್ಮಾಣ ಮಾಡುವುದರಲ್ಲಿ ಸಂದೇಹವಿಲ್ಲ.

ಭಾರತದ ಪರಿಸರವಾದಿಗಳು ಪರಿಸರ ರಕ್ಷಣೆಗೆ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಅಪ್ಪಿಕೋ ಚಳುವಳಿಯಿಂದ ಹಿಡಿದು ಇತ್ತೀಚಿನ ನರ್ಮದಾಬಚಾವೊ, ಕೈಗಾ, ಕೊಜೆಂಟ್ರಿಕ್ಸ್, ಕೊಂಕಣ ರೈಲ್ವೆ, ಮತ್ಸ್ಯಕೃಷಿ ಯೋಜನೆಗಳಂತಹ ಬೃಹತ್ ಯೋಜನೆಗಳ ವಿರುದ್ಧ ಬೃಹತ್ ಹೋರಾಟ ನಡೆದಿದೆ. ಇದರಿಂದಾಗಿ ಸರಕಾರ, 5 ಕೋಟಿ ರೂ. ಗಳ ಮೇಲ್ಪಟ್ಟ ಯೋಜನೆಯ ಅನುಷ್ಠಾನಕ್ಕೆ ಪ್ರಾರಂಭದಲ್ಲಿ ಪರಿಸರಕ್ಕೆ ಹಾನಿ ತರುವುದಿಲ್ಲವೆಂಬ ಖಾತರಿ ಪತ್ರವನ್ನು ಪಡೆದು ಅನಂತರ ಅವ ಕಾಶಮಾಡಿಕೊಡುತ್ತದೆ.

ಪರಿಸರವಾದಿಗಳು ಅಭಿವೃದ್ಧಿ ವಿರೋಧಿಗಳಲ್ಲ, ಆದರೆ ಹಲವಾರು ಯೋಜನೆಗಳನ್ನು ಪರಿಸರಕ್ಕೆ ಪೂರಕ ಯೋಜನೆಗಳಿಲ್ಲದೆ ಕೈಗೊಳ್ಳಲಾಗುತ್ತಿದೆ. ಪರಿಸರದ ಬಗ್ಗೆ ಉದ್ಯಮ, ಅಧಿಕಾರಿ ವರ್ಗ ಹಾಗೂ ಸಮಾಜ ಸಕಾರಾತ್ಮಕ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಇಂದು ಅಸ್ತಿತ್ವದಲ್ಲಿರುವ ಪರಿಸರ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು. ಪರಿಸರ ಮಾಲಿನ್ಯದಿಂದ ಮನುಷ್ಯ ತಾನೂ ನಾಶವಾಗುವುದರೊಡನೆ ಭೂಮಿಯ ಮೇಲಿರುವ ಸುಮಾರು 3 ದಶಲಕ್ಷ ಜೀವರಾಶಿಗಳನ್ನು ನಾಶಮಾಡಿದ ಕರಾಳ ಕಳಂಕವನ್ನು ತಂದುಕೊಳ್ಳದೆ, ಮುಂದಿನ ಪೀಳಿಗೆಗೆ ಆರೋಗ್ಯಕರವಾದ, ನಿರ್ಮಲವಾದ, ಸರ್ವಾಂಗ ಸುಂದರವಾದ ಪರಿಸರವನ್ನು ನಿರ್ಮಿಸುವುದು ಆಧುನಿಕ ಜಗತ್ತಿನ ಪ್ರತಿಯೊಬ್ಬರ ಕರ್ತವ್ಯವಾಗಿದೆ.

● ಪಟ್ಟಡ ಶಿವಕುಮಾರ್

ಕಾಡು ನಮ್ಮ ದೇಶದ ಸಂಪನ್ಮೂಲಗಳಲ್ಲೊಂದಾಗಿದೆ. ಇದನ್ನು ಬೆಳೆಸಿ ಪೋಸಿಸುವುದು ಪ್ರತಿಯೊಬ್ಬನ ಕರ್ತವ್ಯ.

ಬಾಳ ಹೊಸ್ತಿಲಲ್ಲಿ

ಲೇಟ್ ಉಳವಾರ ಎ. ಮಾದಯ್ಯನವರ ದ್ವಿತೀಯ ಪುತ್ರ **ಸುಬ್ಬಯ್ಯ (ಬೆಲ್ಲು)** ರವರ ವಿಹವಾಹವು ಶ್ರೀ ಪಡುವಲ್ಲಿ ಕೆ. ದುಗ್ಗಪ್ಪಗೌಡರ ಮಗಳು **ಜಯಶ್ರೀ (ಶ್ರೀ)** ರವರೊಂದಿಗೆ ತಾ॥ 6-6-97 ರಂದು ಸೀತರಾಮ ಕಲ್ಯಾಣ ಮಂಟಪ, ದುರ್ಗಿ ಗುಡಿ ಶಿವಮೊಗ್ಗದಲ್ಲಿ ನೆರವೇರಿತು.

ನಿಮ್ಮ ಪತ್ರಗಳು

ಇನ್ನೂ ಉತ್ಕೃಷ್ಟವಾಗಿರಲಿ

ಮಾನ್ಯರೆ,

"ಕೊಡಗು ಸಂಗಾತಿ" ಯು ಸಾಧ್ಯವಾದಷ್ಟು ಮಟ್ಟಿಗೆ ಕೊಡಗಿನ ಗ್ರಾಮ ದೇವರುಗಳ ಕಥೆ, ಅವುಗಳು ಹೇಗೆ ಬಂದು ಆಯಾಯ ಊರುಗಳಲ್ಲಿ ನೆಲಸಿದವು ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿ ಪ್ರಕಟಿಸಿದರೆ ಪತ್ರಿಕೆ ಇನ್ನೂ ಉತ್ಕೃಷ್ಟವಾಗಬಹುದು. ಪತ್ರಿಕೆಯು ಒಂದು ಸಂಚಿಕೆಯಿಂದ ಮತ್ತೊಂದು ಸಂಚಿಕೆಗೆ ಪ್ರಗತಿಯಿಂದ ಮುನ್ನಡೆಯುತ್ತಿರುವುದು ಸಂತೋಷದ ಸಂಗತಿ.

ಪೂಜಾರಿ ಮೊಣ್ಣಪ್ಪ,
ಅಡ್ವೋಕೇಟ್, ಬೆಂಗಳೂರು.

ನಾವು ನಿಮ್ಮೊಡನಿದ್ದೇವೆ

ಮಾನ್ಯರೆ,

'ಕೊಡಗು ಸಂಗಾತಿ' ಪತ್ರಿಕೆಯನ್ನು ನೋಡಿ ತುಂಬಾ ಸಂತೋಷವಾಯಿತು. ನಿಮ್ಮ ಸಾಹಸ ಮೆಚ್ಚುವಂತಹದ್ದು. ಪತ್ರಿಕೆಯ ಯಶಸ್ವಿಗಾಗಿ ನಾವೂ ನಿಮ್ಮೊಡನಿದ್ದೇವೆ. ಅರೆ ಭಾಷೆಗೆ ಇನ್ನೂ ಜಾಸ್ತಿ ಪ್ರಾಮುಖ್ಯತೆ ಇರಲಿ.

ಶುಭಾಶಯಗಳೊಂದಿಗೆ, ತಮ್ಮ ವಿಶ್ವಾಸಿ,
ಕುದುಕುಳಿ ರೋಹಿತ್,
ಕರಿಕೆ.

ಅಭಿನಂದನೀಯ

ಮಾನ್ಯರೆ,

ನಿಮ್ಮ ಸಾಹಸ ಅಭಿನಂದನೀಯ ವಿಚಾರವಾಗಿದೆ. ಪತ್ರಿಕೆಯನ್ನು ನೋಡಿ ತುಂಬಾ ಸಂತೋಷವಾಯಿತು.

ಪುರುಷೋತ್ತಮ ಬಿಳಿಮಲೆ,
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕಮಲಾಪುರ.

"ಕೊಡಗು ಸಂಗಾತಿ" ಬೆಳಗಲಿ

ಮಾನ್ಯರೆ,

ನಮ್ಮ ಗೌಡ ಜನಾಂಗದ ಒಂದು ಪತ್ರಿಕೆಯು ಈಗ ತಾನೇ ಉದಯವಾಗಿ ಜನಾಂಗಕ್ಕೆ ಹೊಸ ಹೊಸ ಅನುಭವಗಳನ್ನು ನೀಡುತ್ತಾ, ಶುಕ್ಲ ಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಾ, ಪೂರ್ಣ ಚಂದ್ರನಂತೆ ಶೋಭಾಯಮಾನವಾಗಿ ಚಂದ್ರ ಪ್ರತಿಭೆಯಿಂದ ಅಂಧಾಕಾರವು ಹಾಲು ಚೆಲ್ಲಿದಂತಾಗಲಿ ಎಂದು ಹಾರೈಸುತ್ತೇನೆ.

ಭಗವಂತನು ನಿಮ್ಮ ಈ ದಿಟ್ಟ ಹೆಜ್ಜೆಯ ದಾರಿಗೆ ಮಲ್ಲಿಗೆ ಹೂಹಾಸಿದಂತಾಗಿ ಘಮ ಘಮಿಸುವ ಪರಿಮಳ ಅನವರತ ಪಸರಿಸಲಿ ಎಂದು ಆಶಿಸುತ್ತೇನೆ.

ನಾಟೋಳನ ಶ್ರೀಧರ,
ಸಿದ್ಧಾರ್ಥನಗರ, ಮೈಸೂರು.

ಯಶಸ್ವಿಯಾಗಲಿ

ಮಾನ್ಯರೆ,

ನಿಮ್ಮ ಸಂಚಿಕೆಯು ನನ್ನ ಕೈಸೇರಿದಾಗ, ನನಗೆ ಆಶ್ಚರ್ಯವೂ, ಆನಂದವೂ ಉಂಟಾಯಿತು. ಈ ಪತ್ರಿಕೆಯು ಎಲ್ಲಾ ಓದುಗರ ಮನ ಸ್ಪಂದಿಸುವಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಮುರಳಿಧರ ಪಿ. ಕೆ.
ಕರ್ನಾಟಕ ಪೊಲೀಸ್ ಅಕಾಡೆಮಿ,
ಮೈಸೂರು.

"ಸಂಗಾತಿ" ಬೆಳೆದು ಬಾಳಲಿ

ಮಾನ್ಯರೆ,

ಸರಳವಾದ ಕನ್ನಡ ಹಾಗೂ ಕೊಡಗು ಗೌಡ ಭಾಷೆಯನ್ನು ಒಂದೇ ಕೃತಿಯಲ್ಲಿ ತರುವುದು ಕಷ್ಟ ಸಾಧ್ಯವಾದರೂ, ನೀವು ಹಿಂಜರಿಯಲಿಲ್ಲ. ಕನ್ನಡದಲ್ಲಿ ಗೌಡ ಕನ್ನಡವನ್ನೇ ಪ್ರಬುದ್ಧ ಸ್ಥಿತಿಗೆ ತರುವಲ್ಲಿ ನೀವು ಮುಂದಾಳು. ನಮ್ಮ–ನಿಮ್ಮ "ಕೊಡಗು ಸಂಗಾತಿ" ಬೆಳೆದು ಬಾಳಲಿ ಎಂದು ಹಾರೈಸುತ್ತೇನೆ.

ಡಿ.ಸಿ. ಸ್ವಾಮಿ, ಅಡ್ವೋಕೇಟ್,
ಶ್ರೀರಂಗಪಟ್ಟಣ.

ಅರೆ ಭಾಷಿಕ ವಿಭಾಗ

ಪುಟ್ಟು ಹೈದನ ಹೊಟ್ಟೆ ಬೇನೆ

● ಬಿ.ಆರ್. ಜೋಯಪ್ಪ, ಮಡೆ

ನಮ್ಮ ಪುಟ್ಟು ಹೈದ ಸೊಲ್ಪ ತುಂಟ. ಮನೆಗೆ ನೆಂಟ್ರ್ ಬಂದರಂತೂ ಕಟ್ಟ ಹಾಕಿದ ನಾಯಿ ಮರಿನ ಬಿಚ್ಚಿಕೆ ಹೋಕನ ಆಡ್ದೆಲ್ಲ ಹಂಗೇ ಇವನ ಆಟ. ಆ ನಂಟ 'ಲಂಚ' ಕೊಟ್ಟ ಮೇಲೆಯೇ ಇಂವ ಮೆಲ್ಲಂಗೆ ಅಲ್ಲಿಂದ ಜಾರ್ದು. ಜಿಪುಣ ನೆಂಟ ಬಂದರೆ ಕೆಕ್ಕರ್ಸಿ ನೋಡಿ ಕೋಳಿ ತಲೆಗೆ ನೀರಾಕಂವಂತೇಳಿ ಸುಮ್ಮನಾದು. ಈ ಹೈದನ ಕಥೆ ನೀಸ್ಗೆ ಹೇಳಿಕೆ ಹೊರ್ಟರೆ ನಿಮ್ಮ ಹತ್ರ ಇರವೂ ಓಡುವೊ. ಮೊನ್ನೆದೊಂದು ತಮಾಷೆ ಹೇಳ್ನೆ, ಕೇಳಿ.

ರಾತ್ರೆ ಎಲ್ಲವೂ ಮಲ್ಗಿ ಗೊರ್ಕೆ ಹೊಡಿತಾ ಒಳೊ. ಈ ಪುಟ್ಟು ಹೈದ ತಲೆ ತಿರ್ಪಿ ಹಾಕಿದ ಕೋಳಿ ಥರ ಹಾಸಿಗೆಲಿ ಬೊಬ್ಬೆ ಹೊಡ್ಕಂಡ್ ಉರುಂಡಾಡ್ತ ಉಟ್ಟು. ಮನೆಮ್ಕೆಲ್ಲ ಗಾಬ್ರಿ ! ಥೂ ಈ ಹೈದಂಗೇನಾತ್. ಬಟ್ಟೆಯನಂಗೆ ಊಟ ಮಾಡಿ ಪೊರ್ಲುಲಿ ಮಲ್ಗಿತ್ತಲ್ಲಾ. ಅವ್ವ ದೀಪ ಹಸ್ಸಿತ್. ಅಪ್ಪ ಹೈದನ ತಬ್ಬಿ ಹಿಡ್ಕಂಡತ್. ಪುಟ್ಟು ಹೈದನ ತಮ್ಮ ಇವನ ಈ ಬೊಬ್ಬೆಗೆ ಮೂಲೆಸೇರಿಕಂಡ್ ಮರ್ಗ್ತಾ ಉಟ್ಟು. ಅತ್ತ ಅವನ ಸಮಾಧಾನ ಮಾಡ್ದಂಗಲ್ಲ. ಇತ್ತ ಇವನ ಸಮಾಧಾನ ಮಾಡ್ದಂಗಲ್ಲ. ಪುಟ್ಟುಗೆ ನೀರ್ ಕುಡ್ಯಕೆ ಕೊಟ್ಟೊ, ಕರಿ ಕಾಫಿನೂ ಕೊಟ್ಟೊ, ಸಮಧಾನ ಆತ್‌ಲೆ. ಹೊಟ್ಟೆ ಬ್ಯಾನೆ ತೇಳ್ರೆ ಅದ್ ಅವಂಗೆ ಮಾತ್ರ ಗೊತ್ತು. ಏ ಶಿವನೇ ಈ ಹೈದಂಗೇನಾತ್ ಗ್ರಾಚಾರತೇಳ್ಕಂಡ್ ಅಪ್ಪ ಕೋಳಿಗೂಡ್‌ಗೆ ಓಡ್ತ್. ಕೋಳಿಗ ಒಂದರ ರೆಕ್ಕೆ ಒಳಗೆ ಒಂದು ತಲೆ ನುಗ್ಗಿಸಿಕಂಡ್, ಕುದ್ಡೊಳೊ. ಅಪ್ಪ ಒಂದು ಹುಂಜಲಾಕಿನ ಹಿಡ್ಕಂಡ್ ಬಾತ್. ಅದರ ಕೆಂಪು ಜುಟ್ಟುನ ಕತ್ತಿ ತಕ್ಕಂಡ್ ಕೊಯ್ಯಕೆ ಸುರು ಮಾಡ್ದೊ. ಬೇನೆ ತಡೆಕ್ಕಾಗದೆ ಕೋಳಿ ಕೊರ್ರೇ ಕೊರ್ರೇಂತೇಳಿ ರೆಕ್ಕೆಬಡಿಯಕನ ದೀಪ ಕೆಟ್ ಹೋತ್. ಇದ್ಕೆಮಾರಿ ಬಡಿಯಕೆ, ನಿನ್ನನ ಕೊಲ್ಲುದುಲೆ, ಜೀವ ಹೋದಂಗೆ ಆಡ್ದೆ, ಇದರ ಬಾಯ್ಗೆ ಅಂತ ಬೊಯ್ಕಂಡ್ ದೀಪ ಹೊತ್ತ್‌ಸಿದೊ. ಅದರ ಜುಟ್ಟುಂದ ರಕ್ತ ಸುರಿತಿತ್ತ್. ಆ ರಕ್ತನ ಪುಟ್ಟುಹೈದನ ಹೊಕ್ಕುಳು ಸುತ್ತ ಲೇಪ ಹಾಕಿದೊ. ಅದೇ ಕೋಳಿನ ಚಾಮುಂಡಿಗೆ ಹರ್ಕೆ ಹೊತ್ತೊ. ಹೈದಂಗೆ ಹಿಡ್ದ ಈ ಬೇನೆ ಈ ಕೂಡ್ಲೆ ಹೋಕು ಚಾಮುಂಡಿಗೆ ಊರೊವು ಹಬ್ಬ ಮಾಡ್ಕನ ಈ ಕೋಳಿನ ಕುಯ್ವನೆ, ಎಲ್ಲಾ ಕಷ್ಟಗ ಈ ಕೋಳಿಲೇ ಹಿಡ್ದ್ ನಿಲ್ಲೋಕುಂತೇಳಿ ಹೈದನ ತಲೆಸುತ್ತ ಮೂರು ಸರ್ತಿ ತಂದ್ ಕತ್ತಲೆಲಿ ಕೋಳಿನ ಬುಟ್ಟೊ. ಅದ್ ಕತ್ತಲೆಲಿ ಸದ್ದ್ ಮಾಡದೆ ಕುದ್ದತ್. ಆದರೆ ಈ ಹೈದನ ಬೊಬ್ಬೆ ಕಮ್ಮಿ ಆತಾ ? ಜಾಸ್ತಿ ಜಾಸ್ತಿ ಆಕಂಡೆ ಉಟ್ಟು. ಇನ್ ಮುಂದೆದ್ ಕಥೆ, ಸೊಲ್ಪ ಸುಮ್ಮನಿರಿ.

ಚಾಂಪ ಇನ್ನೊಂದು ಕೋಂಬರೆಲಿ ಮಲ್ಗಿಯುಳೊ. ಹರ್ಕೆ ಹೇಳ್ಕಂಡ್ರೂ ಈ ಹೈದಂಗೆ ಹೊಟ್ಟೆಬೇನೆ ಕಮ್ಮಿ ಆತ್‌ಲೇ ಇನ್ನ್ ಚಾಂಪಂಗಾರ್ ಹೇಳ್ನೊತೇಳಿ ಅವ್ವ ಚಾಂಪನಕ್ಕಲೆ ಹೋಗಿ ಕರೇಕೆ ಸುರು ಮಾಡ್ತ್. ಮಾವ, ಮಾವ, ಓ ಮಾವ, ಮಾವೊ ... ಮಾವಂದ್ ಸದ್ದ್ ಇಲ್ಲೆ ! ಮಾವಂಗೆ ಕೆಬಿ ಕೇಳ್ಸದೆ ಐದ್ ವರ್ಷ ಆತ್. ಕೇವು ಕೋವಿಲಿ ಗುಂಡು ಹಾರ್ಸಿರೂ ಕೇಳಿಕಿಲೆ. ಅಂತಾ ಕೆಬಿ ಅದ್. ಅವ್ವ ಚಾಂಪ ಹೊದ್ದ್ ಕಂಡಿದ್ದ ಕಂಬುಳಿನ ಎಳ್ತ್, ಚಾಂಪಂಗೆ ಎಚ್ಚರ ಆತ್. ಚಾಂಪ ಎದ್ದ್ "ಯಾಕೆನೆ ಬೋಜಿ, ಏನ್‌ನೆ ಬೋಜಿ"ತ ಅವ್ವನಕೇಳ್ತ್. ಆಗ ಅವ್ವ ಪುಟ್ಟು ಹೈದಂಗೆ ಹೊಟ್ಟೆ ಬ್ಯಾನೆ ತೇಳ್ತ್. ಹ್ಹಾ ! ಎಂತದ್ದ್.... ಚಿಟ್ಟೆ ಗೂಡೆ ಹೆರಿಕೆ ಆವುಟಾ. ಓ ದೇವ್ರೆ... ಈ ನಡು ಇರ್‌ಲಿ ಹಿಂಗೆ ಆಕೊ ? ಮೇಲೆ ಮನೆ ಅಜ್ಜನ ಕರೆಕಾಗಿತ್‌ತ ಹೇಳ್ತ್. ಅವ್ವಂಗೆ ನಗೆ ತಡೆಕೆ ಬೊತ್ತ್. ಹಂಗೆಲ್ಲಾ ಮಾವ ಪುಟ್ಟು ಹೈದಂಗೆ ಹೊಟ್ಟೆಬೇನೆ ಗಡತ ಮತ್ತೊಮ್ಮೆ ಹೇಳ್ತ್. ಆಗ ಚಾಂಪ, ಎಂತದ್ ಹೆತ್ತ್‌ಟಾ ? ಎಂತಾ ಕೂಸು ? ಹೊಕ್ಕಳು ಬಳ್ಳಿ ಕೊಯ್ದಾತಾಂತ ಕೇಳೊಕಾ ? ಈ ಮಾವನಕ್ಕಲೆ ಬತ್ತ್‌ತೇಳಿ ಅವ್ವ ಪುಟ್ಟು ಹೈದನೇ ದರದರ ಎಳ್ಕಂಡ್ ಬಂದ್ ಚಾಂಪನ ಮುಂದೆ ನಿಲ್ಸಿತ್. ನೋಡ್ರೆ ಪಿಳ್ಳಿ ! ತತ್...ಕಥೆನೆ ಬೇರೆಂತೇಳಿ ಹೈದನ ಹಿಡ್ಕಂಡತ್. ಹೈದ ನೋ ತಕ ಥೈ ತಾ ಕುಣಿತಾ ಉಟ್ಟು. ಚಾಂಪಗೆ ಈಗ ಗೊತ್ತಾತ್.

ಚಾಂಪ ಕೂಡೆ ಹೇಳ್ತ್ "ಕೋಳಿ ಲಾಕಿನ ತಕಂಬಾ" ಪುನಃ ಅಪ್ಪ ಗೂಡಿ ಗೋಗಿ ಇನ್ನೊಂದುಲಾಕಿನ ಹಿಡ್ಕಂಡ್ ಬಾತ್. ಚಾಂಪ ಹೈದನ ತಲೆ ಸುತ್ತ ತಂದ್ "ಅಜ್ಜಪ್ಪ ದೇವ್ರೆ ಎಲ್ಲಾ ಇದರ ಮೇಲೆ ಹಿಡ್ದ್ ನಿಲ್ಲೊಕುಂತ ಹೇಳಿ ಬುಟ್ಟತ್. ಕೋಳಿ ಸಾ ಕತ್ತಲೆ ಮೂಲೆಲಿ ಕುದ್ದತ್. ಈ ಹೈದನ ಹೊಟ್ಟೆ ಬೇನೆ ಕಮ್ಮಿ ಆತಾ ? ಇಲ್ಲೆ ಪುಟ್ಟುನ ತಮ್ಮ ಮೂಲೆಲಿ ಮರ್ಟ್‌ಕಂಡ್ ಇದ್ದಂವಂಗೆ ಹೊರಗೆ ಹೋವ ಆತುರ. ಅವನ ಎಳ್ಕಂಡ್ ಮರ ಬುಡಲಿ ಕುದ್ರಿಸಿ ನಾಯಿನ ಓಡಿಸಿಕಾಕನ ಪುಟ್ಟು ಹೈದಂಗೂ ಅರ್ಜೆಂಟಾಕೊ. ಅವ್ವಾನಾನು ಬನ್ನೆಂತೇಳಿ ಇನ್ನೊಂದು ಮರದ ಬುಡಲಿ ಕುದ್ದತ್. ಪುಟ್ಟು ಹೈದನ ಹೊಟ್ಟೆ ಬೇನೆ ಪರಾರಿ ! ಅಂವ ಹೊತ್ತಾರೆಂದ ಸಾಂಯ್ಕಾಲದವರೆಗೆ ತಿಂದ ಕರ್ಟ ಪೇರ್ಲ, ಹಲ್ಸ್‌ನ ಕಾಯಿ ತೋಳೆ ಹೊಟ್ಟೆಲಿ ಯುದ್ಧ ಮಾಡ್ತಾ ಇತ್ತ್. ಹೊಟ್ಟೆ ಖಾಲಿ ಆದ ಮೇಲೆ ಕುಂಭಕರ್ಣನಂಗೆ, ಬಿದ್ದ್ ನಿದ್ದೆಮಾಡ್ತ್. ಅಂತೂ ಪುಟ್ಟುನ ಹೊಟ್ಟೆ ಬೇನೆಂದಾಗಿ ಚಾಮುಂಡಿಯೂ, ಅಜ್ಜಪನೂ ಕೋಳಿ ಲಂಚ ಹೊಡ್ದೊ.

ಕಾಡ್ ಬ್ಯಾಟೆ

ನಮ್ಮ ಕನ್ನಡ ಜಿಲ್ಲೆ ಕಡೆ ಕಾಡಿಗೆ ಹೋದು, ಹೊಳೆಂದ ಮೀನ್ ಹಿಡೆವ ಅಬ್ಬೆಸ ಗೌಡ ಆದವಂಗೆ ಉಟ್ಟೆ ಉಟ್ಟು. ಎಲ್ಲೋ ಕೆಲವುಕೆ ಮಾತ್ರ ಸೊಲ್ಪ ಸೋಮಾರಿತನ. ಅಂತೂ ಹಿಡ್ದ್ ತಂದರೆ ಮಾತ್ರ ತಿಂಬಕೆ ಎಲ್ಲವೂ ಉಸಾರ್. ಇನ್ ಗೂಡೆಗ ಹೆಳ್ಮಕ್ಕ ಮೀನ್‌ನ ಹಜಿರ್ ಮಾಡುವ ಕ್ರಮ ನೋಡೊಕು. ಯಾವ ಲಾಯ್ಕ್ಕತ. ಕಲ್ಲ್ ಮುಳ್ಳ್ಯನ ಹೊಟ್ಟೆ ಬಾರುದು, ಅರೆಜ್ಞನ ಚೂಲಿ ಎಳೆದು, ಇದಲ್ಲ ಅಯ್ಯನ ಹೊಟ್ಟೆಂದ ಹುಟ್ಟ್ಯಕನೇ ಕಲ್ತ್‌ಕಂಡ್ ಬಂದ ಕಲೇಂತೇಳಕ್. ಅಂತೂ ಈ ಮೊನ್ ಹಿಡಿವ ಮತ್ತೆ ಕಾಡಿಗೆ ಶಿಕಾರಿಗೆ ಹೋವ ಅಬ್ಬೆಸ ನಂಗೆಸಾ ಉಟ್ಟು.

ವರ್ಸೋಳು ರಜೆ ಸಿಕ್ಕ್ಯಕಾಕನ ನಾನ್ ಹೋದು ಕನ್ನಡ ಜಿಲ್ಲೆಲಿರುವ ನನ್ನ ದೊಡಪನಲ್ಲಿಗೆ. ದೊಡಪಂಗೂಸ ಮಜ್ಞ ಬಂದರೆ ಬಾರಿ ಕುಶಿ. ರಜೆಲಿ ಹೋಗದೆ ಮನೆಲೇ ಇದ್ದ್‌ಬುಟ್ರೆ "ಏನ್‌ನೇ ನಿಂಗೆ ಚಾಕ್‌ರಿ ಸಿಕ್ಕಿದಮೇಲೆ ನಮ್ಮಗ್ಯಾನ ಇಲ್ಲೆ ಕಂಡದೆ", ತೇಳಿ ಬೊಯ್ದ್ ಬುಡುವೊ. ಹಿಂಗಾಗಿ ರಜೆ ಸಿಕ್ಕಿದಾಂಗೆ ನಾನ್ ಅಲ್ಲಿಗೆ ಹೋದು. ಇನ್ನ್ ದೊಡವ ನನ್ನ ಕಂಡಾಂಗೆ "ಹೈದ ಕಳ್ದೊರ್ಸಕ್ಕಿಂತ ಭಾರಿ ಲಾಚಾರ್ ಆಗುಟು" ತೇಳ್ಕಂಡ್ ಕೋಳಿ ಗೀಳಿ ಕೊಂದರೆ ಅರ್ಧ ಮಾಸ ನಂಗೇ ಸೊರ್ಗ್ಗದು. ಇನ್ನ್ ಹಿಟ್‌ಗಳ್ಲ ಕಂಡ ದಿಟ್ಟ್, ಓಡಿಟ್ಟ್, ನೀರ್ದೋಸೆ, ರೊಟ್ಟಿ, ಪುಂಡಿ ಹೀಂಗೆ ದಿನಕ್ಕೊಂದು ಮಾಡಿ ಕೊಡ್ದು. ಯಾಗಾರ್ ಹಂದಿಗಿಂದಿ ಹೊಡ್ದಿದ್ದರೆ ಬೆಸಗೆಲಿ ಉಪ್ಪಣ್ಣ ರೆಡಿ ಮಾಡಿ ಇಡ್ತಿತ್ತ್. ರಜೆ ಮುಗೆಕೆ ಮುಟ್ಟ ಮೀನ್ ಹಿಡಿಯಕೆ ಹೋದು, ಶಿಕಾರಿಗೆ ಹೋದು' ಇದೇ ನಂಗೆ ಕೆಲ್ಸ.

ಇದೆಲ್ಲ ನಮ್ಮ ದೊಡಪ ಕುಸೀಲಿರಿಕನ ನಾವು ಸುರು ಮಾಡ್ದು. ಇಲ್ಲರೆ ಬೊಯ್ದ್ ನಮ್ಮ ಪುಲೀಜಿ ತೆಗ್ದ್ ಬಡುವೊ ! ದೊಡಪ ಒಪ್ಪದಿದ್ದರೆ ಅಡಿಗೆ ಒಳಗೆ ಹೋಗಿ ಅವ್ವ ನಕ್ಕಲೆ ಒಲೆ ಬುಡಲಿ ಕುದ್ದ್ ಕಂಡ್ ಒಲೆಗೆ ಸೌದೆ ಕೊಳ್ಳಿ ನೂಕಿದಾಂಗೆ ಮಾಡಿಕಂಡ್ ಕೇಳ್ದು "ಅವ್ವ ಇಂದ್ ನಾನ್ ಅಣ್ಣನು (ದೊಡಪನ ಮಜ್ಞ) ಕಾಡಿಗೋಕಾಂತ" ಆಗ ಅವ್ವ ಅಪ್ಪನ ಕೇಳ್ ಮಜ್ಞ ತೇಳಿವೆ. ನೀನೇ ಕೇಳವ್ವಾಂತ ನಾನ್. ಅಂತೂ ಇಂತೂ ಅಪ್ಪನ ಒಪ್‌ಸಿ ಒಂದಿನ ರಾತ್ರೆ ಲೈಟೆಗೆ ಹೋದೂಂತ ನಿಗಂಟ್ ಮಾಡ್ದೊ

ಅಣ್ಣ ಬೆಡಿಗೆ ಎಣ್ಣೆ-ಗಿಣ್ಣೆ ಹಾಕಿ ಪೂಜಿ ರೆಡಿ ಮಾಡ್ತ್. ನಾನ್ ಬೊಳ್ಗಲ್ ಗುದ್ದಿ ಕಡ್ಪತ್ತಿನೆಲ್ಲ ಲಾಯ್ಕ್ ಮೊಸ್ತ್ ರೆಡಿ ಮಾಡಿಕಂಡೆ. ಬ್ಯಾಟ್ರಿನೆಲ್ಲ, ಒಂದಿನಕ್ಕೆ ಮುಂದೇ ಅಣ್ಣೆ ಹೈದನ ಕೈಲಿ ತರ್ಸಿಕಂಡಿದ್ದೊ. ಎಡೆ ದಾರಿಲಿ ತಿಂಬಕೆತೇಳಿ ನಾನ್ ಅವ್ವಂಗೆ ಬೇಸಿದ ಗೆಳ್ಸ್, ಮೂಡೆ ಹಿಟ್ಟ್ ಕಡೋಳಿ ಬಾಳೆ ಬೆಣ್ಣ್‌ನೆಲ್ಲ ಒಂದು ಚೀಲಲಿ ಜೋಕೆ ಮಾಡಿಕಂಡೆ. ಅಣ್ಣ ಹೇಳ್ದಂಗೆ ಬೆಳಿ ಬಣ್ಣದ ಕುಡ್ತತೆಗ್ದ್ ಕರಿಕುಡ್ತ ಹಾಕಂಡೆ. ಅಣ್ಣ ತಲೆಗೆ ಮುಂಡಾಸ್ ಸುತ್ತಿ ಲೈಟ್ ಕಟ್ಟೆತ್. ನಾಕ್ ಚೆಲ್ಲ್‌ನ ತೋಟೆ, ಒಂದು ಎಲ್.ಜ. ತೋಟೆ ತಕಂಡ್ ಹೊರ್ಡಿಕಾಕನ, ಅಪ್ಪ ಹಿಂದಕೊಂದು ಇಂಗ್ಲೀಷ್ ಎಲ್.ಜ. ತಂದ್ ಕೊಟ್ಟ್ ಕಡಿವೆ–ಗಿಡಿವೆಗ ಕಾಂಬೊ, ಇಸಿ ಕಣಿತೇಳ್ತ್.

ನಾನ್ ಸಣ್ಣತಿರಿಕಾಕನ ಕಾಡಿಗೆ ಹೊರ್ಡಿಕಾಕನೇ, ಅವ್ವಮನಿ ಹುಳಿಮೆಣ್ಸ್ ಕಡಿತಿದ್ದೊ. ಈಗ ಆಕಾಲ ಹೋತ್. ಕಾಡ್‌ಂದ ಬಂದ ಮೇಲೆ ಕಡ್ಕಲ್ ತೊಳೇದು. ಅಪ್ಪಿತಪ್ಪಿ ಹುಳಿ ಮೆಣ್ಸ್ ಕಡ್ದ್‌ಮನಿ ಇಸಿರೆ ಸಾಂಕಿದ ಕೋಳಿ ಕೊಲ್ಲಿಕಾದು.

ಮನೇಲಿ ಇಲಾತಿ ಕುಡು, ಹಾಳಿ ಮೀನ್ ಹಾಕಿದ ಗೈಪುಲಿ ಹಜ್ಞ ಹುಗ್ಗಿ ಉಂಡದರ್‌ಂದ ಗುಡ್ಡೆ ಹತ್ತಿಕೆ ಯಾವ ಬಂಗ ಆತ್‌ಲೆ. ಅತ್ತಇತ್ತ ಕಮಿನಿಸ್ಟ್ ಬಲ್ಲೆ ಎಡೆಲಿ ಮಾತಾಡದೆ ಮುಂದೆ ಹೋತಿದ್ದೊ. ಅಣ್ಣ ಲೈಟ್‌ಕಟ್ಟ್‌ಕಂಡ್ ಬೇಡಿ ಹಿಡ್ಕಂಡ್ ಮುಂದೆ. ನಾನ್ ಹಜ್ಞ ಪುಕ್ಕಲದಂವ ಅದರ್‌ಂದ ನೊಡುಲಿ ಅಣ್ಣೆ ಹೈದ ನನ್ನ ಹಿಂದೆ. ಬಾಳ ದೂರ ನಡ್ದರೂ ಒಂದು ಕಣ್ಣ್ ಕೂಡ ಕಂಡತ್‌ಲೆ. ಹೆಂಗಾರ್ ಆಗಲಿ ಇನ್ನ್ ಹಜ್ಞ ದೂರ ಪೋಯಿಂತಾತ್. ಅಷ್ಟೊತ್ತಿಗೆ ಎಡ್ದಬರಿಂದ ಹತ್ತ್‌ಗಜ ದೂರಲಿ ಕಣ್ ಕಂಡತ್. ಇದ್ ಬೊರ್ಕ್ಯನೆ ತೇಳಿ ಅಣ್ಣ ಗುಂಡ್ ಹೊಡ್ತ್. ಹಕ್ಕಲೆ ಹೋಗಿ ನೋಡ್ರೆ ಎಂತದ್ ? ಕುದ್ಕ (ಗುಳ್ಳೆನರಿ) "ಇದರ ಪಡೆ ಮುತ್ತೇ ಹೋಗಲಿ" ತೇಳಿ ಅಲ್ಲೇ ಇದ್ದ ಒಂದು ಬೇಂಗದ ಮರದ ಅಡಿಲಿ ಕುದ್ದ್‌ಕಂಡೊ, ಅಣ್ಣ ಒಂದು ಸಿಗ್ರೇಟ್ ಸೇದಿಕೆ ಸರುಮಾಡ್ತ್. ನಾನು ಅಣ್ಣೆ ಹೈದನು ಗೆಳ್ಸ್, ಹಿಟ್ಟನೂ ತಿಂಬಕೆ ಸುರುಮಾಡ್ದೊ. ಹೊಟ್ಟೆ ಗಟ್ಟೆ ಆಗಿ ಮುಂದೆ ನಡಿಯಕೆ ಸೊಲ್ಪ ದಾತ್ ಬಂದಾಂಗಾತ್. ಮುಂದೆ ಬಲ್ಲೆ ನುಗ್ಗಿಗಾಕನ ನನ್ನ ಕಾಲಿಗೊಂದು ಮುಳ್ಳು ಹೆಟ್ಟೆತ್. ಆ ಮುಳ್ಳು ಹಟ್ಟೆದ ಕಾಲ್‌ನ ಎಳ್ಕಂಡ್ ಕುಂಟೆಕಂಡೇ ಹೋದೆ ಈ ಕಾಡ್ ಮಾಸದ ಆಸೆಗೆ. ಒಂದೇ ಒಂದು ಮೊಲ, ಬೊರ್ಕ್ಯ ಆಗಲಿ, ಪಾಂಜ ಆಗಲಿ ಕಂಡತೇಲೆ.

ಇನ್ನ್ ಹೆಂಗಾರ್ ಆಗಲಿ ತೇಳಿ ಮುಂದೆ ಹೋದೊ. ಭಾರೀ ಕಾಡ್. ಎತ್ತ ನೋಡ್ರೂ ಭಾರೀ ಯತ್ತರದ ಮರಗ, ಬೆದಿರ್ ಹಿಂಡ್ಲ್. ಸರಿನಡಿರ್ಲ್, ಹಗ್ಲ್ ಕೂಡ ಲೈಟ್ ಹಾಕಂಡ್ ಹೋಕು, ಅಂತಾ ಕಾಡ್. ಅಂದ್ ಅಮಾಸೆ ಬೇರೆ, ಕರಿಗುಟ್ಟೆ ಕತ್ತಲೆ. ಅಣ್ಣ ಹೈದ ಹಿಂದೆಂದೇ ಹೆದ್ರಿಕಂಡ್-ದರ್ಪಿಕಂಡ್ ಅತ್ತ ಇತ್ತ ತಿರ್ಗ್ಯಂಡ್ ಹೋತಿದ್ದಂವ ಬಸ್ಸ್‌ಲಿ "ಏರ್ ಬ್ರೇಕ್" ಹಾಕಿದಾಂಗೆ ನಿತ್ತತ್. "ಹೈದ ! ಎದ್‌ರ್‌ಂದ ಒಂಟೆ ಕಣ್ಣ್ ಕಂಡದೆ" ತೇಳ್ತ್. ನಾನ್ ನೋಡ್ದೆ. ಕೆಂಪು ಕೆಂಡದಾಂಗೆ ಹೊಳ್ವದೆ ಕಣ್ಣ್. "ಇದ್ ಕಡಿವೆ ಹೊಡಿ ಅಣ್ಣಾ" ತೇಳಿಕೆ ಮುಂದೆ ಅಣ್ಣ ಇಂಗ್ಲೀಷ್ ಎಲ್.ಜಿ. ಇಸಿ ಟಮ್ಮ ಹೊಡ್ತ್. ಅಣ್ಣ ಹೈದ ಹಕ್ಕಲೆ ಹೋಗಿ ಲೈಟ್ ಹಾಕಿ ಅಣ್ಣಾ ಹುಲಿ ! ತೇಳ್ತ್. ಅಣ್ಣ ಹುಲಿ ತೇಳ್‌ಕನ ಹುಲಿ ಕೈಲಿ ಮೊಣ್ಣ್‌ನ ಪರ ಪರ ಪರ ಕೆರೆತಿತ್ತ್. ದೇವರ ದಯೆಂದ ಹುಲಿನ ಎರ್ಡ್ ಕಣ್ಣ್ ಹೋವ್ರುಟು. "ಅದರ ಒಂದ್ ಕಣ್ಣ್ ಇದ್ದ್‌ಬುಟ್ಟದ್ದರೆ ನಾವು ಮೂರ್ ಜನ ಇರಿಕಿತ್ತ್‌ಲೆ" ನನ್ನ ಮೈ ಎಲ್ಲಾ ಆಕ್ಕಿ ಒಡ್ದ್ ದರ್ಪ್ತಿತ್ತ್. ಅಣ್ಣ ಹೈದನ ಚಡ್ಡಿ ತೀರ ಚೆಂಡಿ ಆಗಿ ದರ್ಪ್ತಿತ್ತ್. ಹುಲಿನ ಅಲ್ಲೇ ಬುಟ್ಟ್ ಬರೆಂದ ಕೆಳಿಗೆ ಇಳ್ಜ್ವೊ. ಅತ್ತಂದ ಫಾರೆಸ್ಟ್‌ನವು ಬೆತ್ತ ಕಡೆವ ಸದ್ದ್ ಕೇಳ್ತಿತ್ತ್. ಇನ್ನ್ ನಾವು ಕಾಡ್ ಕೋಳಿ, ಪಾಂಜ ತೇಳಿ ಗುಂಡು ಹೊಡ್ವರೆ ನಮ್ಮನೂ, ಬೆಡಿನೂ, ಜೈಲಿಗೆ ಹಾಕಿವೆ ತೇಳಿ ಸದ್ದಿಲ್ಲದೆ ಮನೆಗೆ ನಡ್ಜೊ.

ನಾನ್ ಮಾತ್ರ "ದಮ್ಮಯ್ಯ ದೇವ್ರೆ ಇನ್ನ್ ನನ್ನ ಏಳೇಳ್ ಜನ್ಮಲಿ ಬೇಟೆಗೆ ಹೋದುಲೇಂತ" ತೀರ್ಮಾನ ಮಾಡ್ಯೊಳೆ.

● ಕೂಡಕಂಡಿರ
ಎಂ. ಉದಯ್ ಕುಮಾರ್

ಗೆಣ್‌ಸ್‌ನ ಹಪ್ಪಳ

ಈಗ ತರ್ಕಾರಿ ತ್ವಾಟ ಎಲ್ಲ ಕಿತ್ತ್, ಗೆಣ್ಸ್ ಎಳ್ಳಿ ಆದ ಸಮಯ. ಮಳೆ ಗಾಲಲಿ ಊಟ ಮಾಡ್ಕನ ಹಪ್ಪಳ ಇದ್ದರೆ ಬಾರೀ ಲಾಯ್ಕ್, ಅದ್ಕೆ ನೀವ್ ಬೆಳ್ದ ಗೆಣ್ಸನ ಹಪ್ಪಳ ಮಾಡಿನೋಡಿ.

ಬೆಳಿ ಗೆಣಸ್ 1ಕೆ.ಜಿ., ಉಪ್ಪು, ಎಣ್ಣೆ ಬೇಕಾದಷ್ಟ್. ಮಾಡ್‌ದು ಹೆಂಗೆ ತೇಳಿರೆ-ಗೆಣ್‌ಸ್‌ನ ಲಾಯಕ್ಕ ತೊಳ್ಕ್ಂಡ್ ಆವಿಲಿ ಬೆಯ್ಸೋಕು. ಮತ್ತೆ ಅವುಗಳನ್ನ ಗಾಳಿಗೆ ತೆರ್‌ದಿಡಕು. ಆರಿದ ನಂತ್ರ ತೊಪ್ಪೆನ ಸುಲಿಯಕ್ಕು. ತೊಪ್ಪೆ ತೆಗೆದ ಗೆಣಸ್ ಗೆ ಉಪ್ಪು ಸೇರ್ಸಿ ಒರಳಿಗೆ ಹಾಕಿ ಲಾಯಕ್ಕಾಗಿ ಕುಟ್ಟಕು. ಹಂಗೆ ಈ ಮುದ್ದೆನ ಬಟ್ಟಲಿಗೆ ಹಾಕಿಕೊಣೊಕು. ಎಣ್ಣೆನ ಕೈಗೆ ಸವರಿಕ್ಕಂಡ್ ಮುದ್ದೇನ ಲಾಯ್ಕ್ ಕಲ್ಸಿಕ್ಕಂಡ್ ಸಂಣ ಸಂಣ ಬೆಣ್ಣೆ ಕಡಂಬ್‌ತರ ಮಾಡಿಕಣಕ್ಕು. ರೊಟ್ಟೆ ಮಾಡ್‌ವ ಮುಕ್ಕಾಲ್ ಮ್ಯಾಲೆ, ಪ್ಲಾಸ್ಟಿಕ್ ಇಲ್ಲೆ ಬಾಳೆಲೆ ಹಾಕಿಕ್ಕಂಡ್ ಎಣ್ಣೆ ಸವರಿಕ್ಕಂಡ್ ಉಂಡೆನ ಅದರ ಮ್ಯಾಲೆ ಇಟ್ಟ್ಕಂಡ್ ಎಣ್ಣೆ ಕೈಲಿ ತಟ್ಟೆಕ್ಕಂಡ್, ಬಿಸಿಲಿಗೆ ಹಾಕಿ ಒಣಗುಸೋಕ್. ಮತ್ತೆ ಬಾಣಲಲಿ ಎಣ್ಣೆ ಹಾಕಿ ಹುರಿಯೋಕು. ತಕ್ಕಂಣಿ ಆಗಯಿ ಗೆಣ್‌ಸ್‌ನ ಹಪ್ಪಳನ.

● ಪಟ್ಟೆಡ ಶೀಲಾಮಣಿ

ರ್‍ಯಾಂಕ್ ಗರಿ ಮೂಡಿಸಿದೋವು

ಕೂಡಕಂಡಿ ಮನೆ ಬಸಪ್ಪನವರ ಮಗ್ಳು ಬಬಿತ 1996-97 ನೇ ಸಾಲಿನ ಎಸ್. ಎಸ್. ಎಲ್. ಸಿ. ಪರಿಕ್ಷೇಲಿ ರಾಜ್ಯಲೇ ಹದಿಮೂರನೇ ರ್‍ಯಾಂಕ್ ಪಡ್ಚುಟು. ಇವ್ಳು ಮೈಸೂರ್‌ನ ಮರಿಮಲ್ಲಪ್ಪ ಶಾಲೇಲಿ ಓದಿದ್ದ್, ಶೇ. 95.36 ರಷ್ಟ್ ಅಂಕಗಳನ್ನ ತೆಗ್ದುಟು.

ಕೊಡಪಾಲ್ ಮನೆ ಬಾಲಕೃಷ್ಣನವರ ಮಂಜ ನಿಶನ್ 1996-97ನೇ ಸಾಲಿನ ಪಿ.ಯು.ಸಿ. ಪರಿಕ್ಷೇಲಿ ಶೇ. 88 ರಷ್ಟ್ ಉತ್ತಮ ಅಂಕಗಳನ್ನ ಪಡ್ದುಟು.

ಇವಿಬ್ಬರೂ ನಮ್ಮ ಜನಾಂಗದ ಕೀರ್ತಿಯ ಹಿರಿಮೆಗೆ, ರ್‍ಯಾಂಕ್ ಗರಿ ಮೂಡಿಸಿಯೊಳೊ. ಇವು ಇನ್ನೂ ಮುಂದು ವರಿಯೋಕು, ಇವರ ಆದರ್ಶ ಎಲ್ಲಾ ಮಕ್ಕಲ್ಲಿ ಮೂಡೊಕುತೇಳ್ದು 'ಸಂಗಾತಿದ್' ಆಶಯ.

ಸಂಗಾತಿ ವಿವಾಹ ವೇದಿಕೆ

31 ವರ್ಷದ 5.2" ಎತ್ತರದ M.A., B.Ed. ಸಹ ಶಿಕ್ಷಕಿ, ಒಕ್ಕಲಿಗ ಪಂಗಡದ ವಿಚ್ಛೇದಿತೆಗೆ ಆಸಕ್ತ ಪದವೀಧರ, ಉದ್ಯೋಗಸ್ಥ (ವಿಧುರ ಆದರೂ ಪರವಾಗಿಲ್ಲ) ಕೊಡಗು ಗೌಡ/ಒಕ್ಕಲಿಗ ಪಂಗಡಕ್ಕೆ ಸೇರಿದ ವಿಶಾಲ ಮನೋಭಾವದ ವರ **ಬೇಕಾಗಿದೆ.**

ಸಂಪರ್ಕಿಸಿ : **ಕೊಡಗು ಸಂಗಾತಿ**
322, ಬೋಗಾದಿ ಸರ್ಕಲ್ ಹಿನ್‌ಕಲ್
ಮೈಸೂರು-570017.

ಪೊಪ್ಪನ ಕರ್ಯ ನಾಯಿ

ಪೊಪ್ಪ ಸಾಕಿತ್ ಒಂದು ಕರಿ ನಾಯಿ
ಅದನ್ನ ಕರ್ತ್ ಪ್ರೀತಿಲಿ ಕರ್ಯ ನಾಯಿ
ಊಟ ಮಾಡ್‌ಕ್ಕನ ಇಡ್ತಿತ್ತ್ ಒಂದೊಂದ್ ಮುದ್ದೆ
ಉರ್ಪ್ಟ ಉರ್ಪ್ಟಗಿ ಬೆಳ್ತ್ ಕರ್ಯ ಮುಂದೆ

ಪೊಪ್ಪನೊಟ್ಟಗೆ ಅದಿಕೆ ಎಲ್ಲಿಲ್ಲದ ಪ್ರೀತಿ
ಪೊಪ್ಪಂಗೂ ಅಷ್ಟೆ ಅದರ ಮೇಲೆ ತುಂಬಾ ಪ್ರೀತಿ
ಪೊಪ್ಪನ ಕಾಂಬಕನ ಹಾರ್ತಿತ್ತ್ ಮೇಲೆ
ಪೊಪ್ಪ ಇಲ್ಲದಿರ್ಕನ ಸೇರ್ತಿತ್ತ್ ಮೂಲೆ

ರಾತ್ರಿ ಪೂರಾ ಬೊಗೊಳಿಕೊಂಡ್ ಇರ್ದ
ಹಗಲಿಡೀ ಬಿದ್ಕಂಡ್ ಒಳ್ಳೆ ನಿದ್ದೆ ಮಾಡ್ದು
ಒಂದು ರಾತ್ರಿ ನಡ್ತ್ ಒಂದ್ ವಿಷಯ
ಅದ್ನ ಹೇಳ್ರೆ ನಿಮಿಗಾದು ಆಶ್ಚರ್ಯ

ಹೋಗಿದ್ದೊ ನಾವೆಲ್ಲಾ ನೆಂಟ್ರ ಮನೆಗೆ
ಪೊಪ್ಪ ಮಾತ್ರ ಇದ್ದೊ ಮನೆ ಒಳ್ಗೆ
ನಡ್ ರಾತ್ರೇಲಿ ಕರ್ಯನ ಜೋರ್ ಬೊಬ್ಬೆ
ಆಗಲೇ ನಿತ್ತ್ ಹೋತ್ ಪೊಪ್ಪಂಗೆ ನಿದ್ದೆ

ಪೊಪ್ಪ ತೆಗ್ತ್ ಮೂಡನ ಬಾಗ್ಲ್ ಕೂಡ್ಲೆ
ಕರ್ಯ ಹಾರ್ತ್ ಮೇಲೆ ಬಂದ್ ಆಗ್ಲೆ
ಪೊಪ್ಪನ ಬಟ್ಟೆಗೆಲ್ಲಾ ಆತ್ ರಕ್ತ
ಪೊಪ್ಪನ ಕೈಂದ ಬೀತ್ ಎರಡ್ ಬಿಗ್ತ

ಬಿದ್ಬುಟು ಮೆಟ್ಲ್‌ಲಿ ಕಟ್ಟದ ಹಾವು
ಕರ್ಯನಿಂದಲೇ ಆದ್ ಅದರ ಸಾವು
ಪೊಪ್ಪಂಗೆ ಆತ್ ತುಂಬಾ ನೋವು
ಕರ್ಯಂಗೆ ಕೊಟ್ಟೆ ಪೆಟ್ಟ್‌ನ ಬಾವು

ಒಂದು ದಿನ ಕರ್ಯ ಮಾಡ್ತ್ ವಾಂತಿ
ಆತ್ ಪೊಪ್ಪಂಗೆ ಎಲ್ಲಿಲ್ಲದ ಭೀತಿ
ಪೊಪ್ಪನ ತೊಡೆ ಮೇಲೆ ಇಟ್ಟಿತ್ ತಲೆ
ತನ್ನ ಜೀವನ ಬುಟ್ಟಿತ್ ಆಮೇಲೆ

ಕೋಳಿ ಕಳ್ಳರ್ ಮಾಡ್ದ ಈ ಕೆಲ್ಸ
ಕಡುಂಬುಲಿ ಇಟ್ಟದ್ದೊ ಕರ್ಯಂಗೆ ವಿಷ
ಕರ್ಯಂಗೆ ಇದ್ದ ಆ ನೀತಿ
ಮನುಷ್ಯಂಗೆ ಎಲ್ಲಿಟ್ಟು ಆ ಪ್ರೀತಿ

● **ಕೋಟೆಮನೆ ಮನೋಹರ ಶಿವಯ್ಯ**
ಮದೆನಾಡು.

ನ ಗೆ ಹ ನಿ

ಯಾಗೋಳು ಸಾಲೇಲಿ ಕೀಟ್ಲೆ ಮಾಡ್ತಾ ಇದ್ದ ಚೋಮಣಂಗೆ ಒಂದ್ ದಿನ ಟೀಚರ್ ಹೇಳ್ತ್,

"ನೀನ್ ಸಾಲೆಗೆ ಬಾಕನ ಅಪ್ಪನ ಕರ್ಕಂಡ್ ಬರೋಕು"

ಚೋಮಣ : ಅಪ್ಪ ದುಬಾಯಿಲಿ ಇರ್ದ ಟೀಟರ್, ಮೂರ್ ವರ್ಸಾತ್ ಇನ್ನೂ ಬಾತ್‌ಲೆ.

ಟೀಟರ್ : ಹಂಗಾರೆ ಅವ್ವನ ಕರ್ಕಂಡ್ ಬಾ

ಚೋಮಣ : ಅವ್ವ ಹೆರಿಕಾಗೊಟ್ಟು ಟೀಟರ್, ಹೊಟ್ಟೆ ದಪ್ಪ ಆಗಿ ನಡಿಯಕೆ ಆದುಲ್ಲೆ !

● **ಎಂ. ಎ. ಮುಹಮ್ಮದ್,**
ಫಿರ್ದೋಶಿ ಪತ್ರಿಕೆ, ಮಡಿಕೇರಿ,

ವಾಪಸ್ ಕೊಡ್ತಾ ಒಳೆ

ಕೆಲಸದಂವ : ಗೌಡ್ರೇ ಇಂದ್ ಬೆಳಿಗ್ಗೆ ಕಸದ ಬುಟ್ಟೆಲಿ ಹತ್ತ್ ರೂಪಾಯಿ ಒಂದ್ ನೋಟ್ ಸಿಕ್ಕಿತ್, ತಕಣಿ

ಗೌಡ : ಇದ್ ನಿಜವಾದ ನೋಟ್ ಅಲ್ಲ ಇದ್‌ನ್ನ ಬುಟ್ಟೆಲಿ ನಾನೇ ಬಿಸಾಡ್ದ್

ಕೆಲಸದಂವ : ಅದಕ್ಕಾಗಿ ನಾನ್ ಇದ್‌ನ ನಿಮ್ಗೆ ವಾಪಸ್ ಕೊಡ್ತಾ ಒಳೆ ಗೌಡ್ರೇ

ಹೆಸರ್ ಏನ್

ಗುರು – ನಿನ್ನ ಮತ್ತೆ ನಿನ್ನ ಅಪ್ಪನ ಹೆಸರ್ ಏನ್ ?

ವಿದ್ಯಾರ್ಥಿ – ನನ್ನ ಹೆಸ್‌ರ್ ಸೂರ್ಯ ಪ್ರಕಾಶ್ ಮತ್ತೆ ನನ್ನ ಅಪ್ಪನ ಹೆಸ್‌ರ್ ಬಾಲ ಜೀವನ ಸರ್

ಗುರು - ಇದರ್ನೆ ಇಂಗ್ಲೀಷ್‌ಲಿ ಹೇಳ್, ನೋಡೊಣ

ವಿದ್ಯಾರ್ಥಿ - ಮೈ ನೇಮ್ ಈಸ್ ಸನ್‌ಲೈಟ್ ಅಂಡ್ ಮೈ ಫಾದರ್ ನೇಮ್ ಈಸ್ ಲೈಫ್ ಬಾಯ್

ತೀರಿ ಹೋದೊ

ಮೂಪನ ಮನೆ ಕುಟ್ಟಪ್ಪನವು ಜೂನ್ 11 ರಂದ್ ಮೈಸೂರ್‌ಲಿ ತೀರಿ ಹೋದೊ. ಇವು ಹೆಣ್ಣ್, ಇಬ್ಬೊರು ಗಂಡ್ ಮಕ್ಕ, ಮತ್ತೊಬ್ಬ ಮಗಳ್‌ನ ಅಗಲಿಯೊಳೊ. ಇವು ಮಾಜೀ ಸೈನಿಕರಾಗಿದ್ದ್, ಈಗ ಬಿ.ಇ.ಎಂ.ಎಲ್. ಲಿ ಕೆಲ್ಸ ಮಾಡ್ತಿದ್ದೊ.

ಧನ್ಯವಾದಗಳು

ಸೂದನ ಪೊನ್ನಪ್ಪ ಮೋಹನ್ ಇವರು ಮೈಸೂರು
ನಗರಾಭಿವೃದ್ಧಿ ಪ್ರಾಧಿಕಾರದ ಉದ್ಯೋಗಿಯಾಗಿದ್ದು,
ಕೊಡಗು ಸಂಗಾತಿಯ ಜೀವಾವಧಿ ಸದಸ್ಯತ್ವ (ರೂ. 1000/-)
ಕೊಟ್ಟು ಪತ್ರಿಕೆಯ ಬೆಳವಣಿಗೆಗೆ ಸಹಕರಿಸಿದ್ದಾರೆ.
ಇವರಿಗೆ ಬಳಗದ ಧನ್ಯವಾದಗಳು.

"ಕೊಡಗು ಸಂಗಾತಿ" ಪತ್ರಿಕೆ ದೊರೆಯುವ ಸ್ಥಳಗಳು :-

ಮೊಂಟಡ್ಕ ಕುಶಾಲಪ್ಪ, ವ್ಯಾಪಾರಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ.
ನೀಲಕಂಠೇಶ್ವರ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ.
ಪೊನ್ನೇಟಿ ಸುಬ್ಬಯ್ಯ, ಸಂಗಾತಿ ಏಜೆಂಟ್, ಭಾಗಮಂಡಲ.
ಕೊಡಗು ಗೌಡ ವಿದ್ಯಾರ್ಥಿನಿಲಯ, ಜಯಲಕ್ಷ್ಮಿಪುರಂ, ಮೈಸೂರು.
ಆಶೀರ್ವಾದ್ ಪ್ರಿಂಟರ್ಸ್, ವಿನಾಯಕನಗರ, ಮೈಸೂರು.
ಸೂರ್ಯ ಪ್ರೆಸ್, ಕುಶಾಲನಗರ.

ಪ್ರಿಯ ಓದುಗರೆ,

ಲೇಖನಗಳನ್ನು ಸೃಷ್ಟಿಸುವ ಕಲೆ ಹುಟ್ಟಿನಿಂದಲೇ ಬಂದುದಲ್ಲ, ಲೇಖನಿ ಹಿಡಿದು ಕುಳಿತರೆ ಅದು ನಿಮಗೂ ಸಾಧ್ಯ. ನಿಮ್ಮ ಯಾವುದೇ ಬರಹಗಳನ್ನು ನಿಮಗೆ ತಿಳಿದ ಶೈಲಿಯಲ್ಲಿಯೋ ಬರೆದು ನಮಗೆ ಕಳುಹಿಸಿ ಚಿಂತನೆ, ವಿಚಾರ ಲೇಖನ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಕೃಷಿಕ, ಹಾಸ್ಯ ಕಥೆ, ಕವನ ಇತ್ಯಾದಿಗಳನ್ನು ಕನ್ನಡ ಮತ್ತು ಗೌಡ ಕನ್ನಡವೇ ಆಗಿರಲಿ ಸಂಗಾತಿಗೆ ಬರೆದು ಕಳುಹಿಸಿ.
ಕೊಡಗು ಸಂಗಾತಿಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಿ.

-ಸಂ.

ಗೌಡ ಜನಾಂಗದ ಬಾಳ ಸಂಗಾತಿಯಾಗಿ

ಮನೆ-ಮನ ಬೆಳಗುತ್ತಿರುವ

ಕೊಡಗು ಸಂಗಾತಿಗೆ

ಶುಭಾಶಯಗಳು....

ಶ್ರೀ ನಡುಮನೆ ಸುಬ್ಬಯ್ಯ ಗಣಪತಿ, (BEML)

ಮತ್ತು

ಶ್ರೀಮತಿ ನಡುಮನೆ ನಾಗವೇಣಿ ಗಣಪತಿ,

(ಭಾರತೀಯ ಆಯುರ್ವೇದ ಪದ್ಧತಿ ಮತ್ತು ಚಿಕಿತ್ಸೆ)

ಹಾಗೂ

ಕುಮಾರ ನಡುಮನೆ ನವೀನ್ ಗಣಪತಿ

ಕುಮಾರಿ ನಡುಮನೆ ರಚನಾ ಗಣಪತಿ

ವಿಳಾಸ :

ಮನೆ ನಂ. 211, 2ನೇ ಬಿ. ರಸ್ತೆ, ಗೋಕುಲಂ 2ನೇ ಹಂತ,
ಮೈಸೂರು. ಫೋನ್ : 410827

Edited, Published and Owned by PATTADA. P. SHEELAMANI, Published at No. 322, Bhogadi Circle, Hinkal Post, Mysore-570017.
Printed at ASHIRWAD PRINTERS, 180/A, 6th Main, Vinayakanagar, Mysore-570012.